CC-O. In Public Domain. Digitized by eGangotri

ದಾಸೋಹಂ

(ಶ್ರೀಕೃಷ್ಣ ಕೀರ್ತನೆ ಪುಂಜರಿ)

ಶ್ರೀಮತಿ ಪದ್ಮಾವತೀಬಾಯಿ
ಡಾ|| ಕೃಷ್ಣಸ್ವಾಮಿರಾವ್

ಪ್ರಕಾಶಕರು :
ರಾಘವೇಂದ್ರ ಪ್ರಕಾಶನ
ಬೆಂಗಳೂರು-18.

Sri Vidyabharathi Book Centre, Sringeri

DASOHAM: A collection of devotional songs written by Smt. Padmavathibai & Dr. Krishnaswami Rao Published by Raghavendra Prakashana, No. 194, Lakshmi Nilaya, Raghavendra Colony, Bangalore-560 018.

CC-O. In Public Domain. Digitized by eGangotri

ಬೆಲೆ: 4-95

ಪ್ರಥಮ ಮುದ್ರಣ 1979

ಮುದ್ರಕರು: ರವಿಟೈಪರ್ಸ್, ಬಳೇಪೇಟೆ, ಬೆಂಗಳೂರು-53.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಈ ಗ್ರಂಥದಲ್ಲಿರುವ ಪ್ರತಿಯೊಂದು ಕೃತಿಯೂ ನಮ್ಮ ಗುರ್ವಂತರ್ಗತ ಶ್ರೀ ಹರಿವಾಯುಗಳ ಅನುಗ್ರಹದಿಂದ ತಾನಾಗಿ ಹೊರಹೊಮ್ಮಿದುದೇ ಹೊರತು, ಇದರ ರಚನೆಯಲ್ಲಿ ಅಲ್ಪಜೀವಿಗಳಾದ ನಮ್ಮ ಪಾತ್ರವೇನಿಲ್ಲ. ಸುಜೀವಿಗಳೆಲ್ಲರೂ ಇದರ ಲಾಭವನ್ನು ಪಡೆಯಲಿ ಎಂದು ಬಯಸುವೆವು.

ಹತ್ತಾರು ವರ್ಷಗಳ ಮೊದಲೇ ಸಿದ್ಧವಾಗಿದ್ದ ಈ ದೇವರನಾಮಗಳನ್ನು ಮುದ್ರಿಸಲು ಮುಂದೆ ಬಂದು ಅಪರ ಜವಾಬ್ದಾರಿಯೆಲ್ಲವನ್ನೂ ನಿರ್ವಹಿಸಿರುವ ಶ್ರೀ ರಾಘವೇಂದ್ರ ಪ್ರಕಾಶನದ ಶ್ರೀಮತಿ ರಾಜಲಕ್ಷ್ಮಿ ಪಾರ್ಥಸಾರಥಿ ದಂಪತಿಗಳಿಗೆ ಶ್ರೀ ಹರಿವಾಯುಗಳ ಪೂರ್ಣ ಅನುಗ್ರಹವಿರಲಿ ಎಂದು ಹರಸಿ, ಇದೇ ರೀತಿ ಧಾರ್ಮಿಕ ಕಾರ್ಯಗಳಲ್ಲಿ ಅವರ ಆಸಕ್ತಿ ಹೆಚ್ಚಿಸುವಂತೆ ನಮ್ಮ ಉಪಾಸ್ಯಮೂರ್ತಿ ಪಾಂಡುರಂಗನಲ್ಲಿ ಪ್ರಾರ್ಥಿಸುತ್ತೇವೆ.

ಬೆಂಗಳೂರು
3-8-1979

ಶ್ರೀಮತಿ ಪದ್ಮಾವತಿಬಾಯಿ
ಡಾ|| ಕೃಷ್ಣ ಸ್ವಾಮಿರಾವ್

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಿಕಾರರ ಬಗ್ಗೆ:

ಈ ಕೃತಿಯ ಕರ್ತೃಗಳಾದ ಶ್ರೀಮತಿ ಪದ್ಮಾವತಿಬಾಯಿ ಮತ್ತು ಶ್ರೀ ಡಾಕ್ಟರ್ ಕೃಷ್ಣಸ್ವಾಮಿರಾಯರು ಆದರ್ಶ ಆಸ್ತಿಕ ದಂಪತಿಗಳು. ಇವರು ಪರಮಪ್ರಿಯ ಶ್ರೀ ಸುಬ್ಬರಾಯದಾಸರಿಂದ ಅಂಕಿತ ಪಡೆದ ಅಪಾರಷ್ಟಿಶಿಷ್ಯ ಸಮುದಾಯಕ್ಕೆ ಸೇರಿದವರು.

ಶ್ರೀ ಪರಮಪ್ರಿಯ ಸುಬ್ಬರಾಯದಾಸರು ಜನಿಸಿದ್ದು ದೇವರಾಯನ ದುರ್ಗದಸವಿೂಪದಲ್ಲಿರುವ ನರಸೀಪುರ ಎಂಬ ಗ್ರಾಮದಲ್ಲಿ. ಇಲ್ಲಿ ವ್ಯಾಸ ರಾಯರಪೀಳಿಗೆಯ ಶ್ರೀ ಲಕ್ಷ್ಮೀನಾಥ ಶ್ರೀಪಾದಂಗಳವರ ವೃಂದಾವನವಿದೆ. ಸುಬ್ಬರಾಯದಾಸರು ಶಿಶುವಾಗಿದ್ದಾಗ ಘಟಸರ್ಪವೊಂದು ಮಲಗಿದ್ದ ಶಿಶುವಿನ ಮೇಲ್ಭಾಗದಲ್ಲಿ ಹೆಡೆಯಾಡುತ್ತಾ ಇದ್ದು ಮರೆಯಾಯಿತಂತೆ. ಪ್ರತೀತಿ ಯಂತೆಯೇ ಸುಬ್ಬರಾಯದಾಸರು, ಅತ್ಯಂತ ಪ್ರಸಿದ್ಧರಾಗಿ ಮಹಾನ್ ಆಸ್ತಿಕ ಶಿರೋಮಣಿಯೆನಿಸಿದ್ದಾರೆ.

ಸಂಸ್ಕಾರ, ಪರಿಸರಗಳಿರಡೂ ಸುಬ್ಬರಾಯದಾಸರ ಮೇಲೆ ಬಾಲ್ಯದಲ್ಲೇ ಪ್ರಭಾವ ಬೀರಿ, ಅವರು ಜ್ಞಾನ, ಭಕ್ತಿ, ವೈರಾಗ್ಯಗಳ ಸಾಕಾರಮೂರ್ತಿಯೆನಿಸಿದರು. ಅವರ ಸ್ವರೂಪ ಯೋಗ್ಯತೆಗನುಸಾರವಾಗಿ, ಅವರ ಉಪನಯನ, ಅಬ್ಬೂರು ಮಠದ ಯತಿವರ್ಯರಾದ ಪೂಜ್ಯ ಶ್ರೀ ಲಕ್ಷ್ಮೀಪ್ರಿಯ ಶ್ರೀ ಪಾದಂ ಗಳವರ ಅಮೃತ ಹಸ್ತದಿಂದಲೇ ನೆರವೇರಿತು. ಅತ್ಯಂತ ಶೀಘ್ರದಲ್ಲಿಯೇ ಇವರು ಶಾಸ್ತ್ರಾದಿ ವಿಷಯಗಳಲ್ಲಿ ಪಾರಂಗತರಾದರು. ಆಧ್ಯಾತ್ಮಿಕವಾಗಿ ಉತ್ತುಂಗಕ್ಕೇರಿದುದಂತೆಲ್ಲಾ, ಲೌಕಿಕ ವಿಷಯಾಸಕ್ತಿಗಳ ಬಗ್ಗೆ ಜಿಗುಪ್ಸೆ ತಳೆದು, ಸಂಸಾರಿಕ ಜೀವನದಲ್ಲಿ ಅಂಟಿಯೂ ಅಂಟದಂತೆ ಭಗವಂತನ ಕೀರ್ತನೆ ಸ್ಮರಣೆಗಳಲ್ಲೇ ಕಾಲ ಕಳೆದರು. ಶ್ರೀ ಪುರಂದರದಾಸರ ಪರಂಪರಾನುಗತವಾಗಿ ಬಂದ ದಾಸಕೂಟದಲ್ಲಿ ಒಬ್ಬರಾಗಿ, ಸಕಲ ಶಾಸ್ತ್ರಾರ್ಥ ಸಾರವನ್ನು ಸರಳ ವಾಗಿ ಸಮಾಜಕ್ಕೆ ಒದಗಿಸಬೇಕೆನ್ನುವ ಅವರ ಹಂಬಲಕ್ಕೆ ದೈವಾನುಗ್ರಹವೂ

Sri Vidyabharathi Book Centre, Sringeri

CC-O. In Public Domain. Digitized by eGangotri

ದೊರೆಯಿತು. ಶ್ರೀ ಕರಿಗಿರಿ ಲಕ್ಷ್ಮೀನರಸಿಂಹನ ಅನುಗ್ರಹದಿಂದಲೇ ದೊಡ್ಡ ಬಳ್ಳಾಪುರದ ಮುದ್ದು ಮೋಹನದಾಸರಿಂದ ದಾಸ ದೀಕ್ಷೆ ದೊರೆತು, ತಂದೆ ಮುದ್ದು ಮೋಹನ ವಿಠಲ ಎಂಬ ಅಂಕಿತ ದೊಡನೆ ಶ್ರೀ ಹರಿಯನ್ನು ಕೊಂಡಾಡುತ್ತಾ ಅವರೊಂದಿಗೆ ಇಂದಿನ ನಾಸ್ತಿಕತೆಯಿಂದ ಕೂಡಿರುವ ಜಗತ್ತಿನಲ್ಲಿ ಸಾವಿರಾರು ಜನ ಶಿಷ್ಯರನ್ನು ಆಸ್ತಿಕ ಮಾರ್ಗದಲ್ಲಿ ಆದೇಶಿಸಿ ಅಂಕಿತ ಪ್ರದಾನ ಮಾಡಿದ್ದಾರೆ. ಅಪರೋಕ್ಷಜ್ಞಾನಿಗಳೂ ಶೇಷಾಂಶ ಸಂಭೂತರೂ ಎನಿಸಿರುವ ಇವರ ಕೀರ್ತಿಯು ಸಹಸ್ರ ಮುಖಗಳಿಂದ ಬೆಳಗುತ್ತಿದೆ.

ಇಂತಹ ಮಹಸೀಯರಿಂದ ಅಂಕಿತ ಸ್ವೀಕಾರ ಪರಮಾತ್ಮನ ವಿಶೇಷ ಅನುಗ್ರಹದಿಂದ ಮಾತ್ರ ಸಾಧ್ಯ. ಈ ಸಾಧ್ಯತೆಯನ್ನು ತಮ್ಮದಾಗಿಸಿಕೊಂಡಿರುವ ಪೂಜ್ಯ ಶ್ರೀಮತಿ ಪದ್ಮಾವತಿ ಬಾಯಿ ಹಾಗೂ ಶ್ರೀಕೃಷ್ಣ ಸ್ವಾಮಿರಾವ್ ದಂಪತಿಗಳದ್ದಾಗಿದೆ. ಸತ್ಕುಲ ಪ್ರಸೂತರಾದ ಈ ಸಜ್ಜನ ದಂಪತಿಗಳು ಕ್ರಮವಾಗಿ ಪದುಮೇಶ ವಿಠಲ ಹಾಗೂ ಇಂದಿರಾಲೋಲ ವಿಠಲ ಎಂಬ ಅಭಿದಾನಗಳನ್ನು ಪಡೆದಿದ್ದಾರೆ. ಒಂದೇ ನಾಣ್ಯದ ಎರಡು ಮುಖಗಳಂತಿರುವ ಈ ದಂಪತಿಗಳು, ಸಾಂಸಾರಿಕ ಜೀವನದ ಸುಖ ದುಃಖಗಳನ್ನು ಒಂದಾಗಿ ಅನುಭವಿಸಿ ಅವುಗಳ ನಡುವೆಯೇ ಅನೇಕ ದೇವರನಾಮಗಳನ್ನು ರಚಿಸಿದ್ದಾರೆ. ಶ್ರೀ ಹರಿಯನ್ನು ಕೊಂಡಾಡಿರುವ ಅವರು ತಮ್ಮಿಂದ ಆದುದೆಂಬುದನ್ನು ಒಪ್ಪಿಕೊಳ್ಳದೆ ಶ್ರೀಹರಿಯೇ ನುಡಿಸಿದ್ದು ಎನ್ನುವ ಅಚಲ ವಿಶ್ವಾಸವನ್ನು ನಿಷ್ಠೆಯನ್ನು ಹೊಂದಿದ್ದಾರೆ. ಪತಿ-ಪತ್ನಿಯರ ಭಿನ್ನ ವಿಚಾರ ಧಾರೆಗಳೂ ಕೆಲವೊಮ್ಮೆ ಒಂದೇ ಅಂಕಿತದಲ್ಲಿ ಹೊರಹೊಮ್ಮಿರುವುದು ಇಲ್ಲಿನ ಕೃತಿಗಳ ವೈಶಿಷ್ಟ್ಯ.

ಮನೆಯೇ ಸಮಾಜದ ಮೂಲ.

ಸಮಾಜ ಆಸ್ತಿಕ ಪಥದಲ್ಲಿ ಮುಂದುವರೆಯಬೇಕಾದರೆ ಅದರ ಪ್ರಾರಂಭ ಮನೆಯಿಂದಲೇ ಆಗಬೇಕು. ಪ್ರತಿಯೊಂದು ಮನೆಯ ಧಾರ್ಮಿಕ ಪ್ರವೃತ್ತಿಗೆ ಗೃಹಿಣಿಯೇ ಕಾರಣಳಾಗಿ, ಆ ಮೂಲಕ ಆಕೆಯ ಜವಾಬ್ದಾರಿ ಅತ್ಯಂತ ಮಹತ್ವವಾದ್ದಾಗಿದೆ. ಈ ಜವಾಬ್ದಾರಿಯನ್ನು ಅತ್ಯಂತ ಸಮರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಹೊತ್ತು ನಡೆಯುತ್ತಿದ್ದಾರೆ, ಶ್ರೀಮತಿ ಪದ್ಮಾವತಿಬಾಯಿಯವರು. ಅನೇಕ ಸಾಂಸಾರಿಕ ತೊಂದರೆಗಳು ಬಂದಾಗ್ಯೂ ಧೈರ್ಯದಿಂದ ಎದುರಿಸಿ, ತಾರತಮ್ಯಾನುಸಾರವಾಗಿ ಶ್ರೀ ಹರಿಯನ್ನು ತಮ್ಮ ಕೃತಿಗಳಲ್ಲಿ ಸ್ತುತಿಸಿದ್ದಾರೆ. ಅತ್ಯಂತ ಸರಳವಾದ, ಮನಮುಟ್ಟುವ ನೇರಕಾವ್ಯ ಶಬ್ದಗಳಿಂದ ಇವರ ಕೃತಿಗಳು ಅರ್ಥಪೂರ್ಣವೆನಿಸಿವೆ. ತಮ್ಮ ಕಷ್ಟಕಾಲದಲ್ಲಿ ಶ್ರೀಲಕ್ಷ್ಮೀ ಅಂತರ್ಗತ ಶ್ರೀ ಹರಿಯನ್ನು ಪ್ರಾರ್ಥಿಸಿ ಲಕ್ಷ್ಮೀ ಕಟಾಕ್ಷವನ್ನು ಪಡೆದದ್ದು ಅವರ 'ಸಿರಿದೇವಿ ನೀ ಬಂದು ಕಣ್ ತೆರೆದು ನೋಡು' ಎಂಬ ಕೃತಿಯಲ್ಲಿ ಸುಲಲಿತವಾಗಿ ನಿರೂಪಿಸಲ್ಪಟ್ಟಿದೆ.

ಶ್ರೀಕೃಷ್ಣನ ಬಾಲಲೀಲೆಗಳನ್ನು ಕೊಂಡಾಡುವ ಅವರ ಕೃತಿಗಳಲ್ಲಿ ಅವರ ಮಾತೃ ಹೃದಯವು ನಿಡಿತವನ್ನು ಕಾಣುತ್ತೇವೆ. ನಂದ ಗೋಕುಲದ ಗೋಪ ಕನ್ಯೆಯರಲ್ಲಿ ಒಂದಾಗಿ ಅನುಭವಿಸಿದಂತೆ, ಶ್ರೀಕೃಷ್ಣನನ್ನು ತನ್ಮಯತೆಯಿಂದ ಪ್ರೀತಿ ಭಕ್ತಿಗಳಿಂದ ಸ್ತುತಿಸಿರುವುದನ್ನು, ಅವರ ಕೆಲವು ಕೃತಿಗಳಲ್ಲಿ ಕಾಣಬಹುದು. ಶ್ರೀಕೃಷ್ಣನೆಡೆಗೆ ಅವರು ಹೊಂದಿರುವ ಸರ್ವ ಸಮರ್ಪಣ ಭಾವದ ಹೆಮ್ಮೆಯು ಅವರ "ಶ್ರೀಕೃಷ್ಣದಾಸಿ ನಾನು" ಎನ್ನುವ ಕೃತಿಯಲ್ಲಿ ಅಮೋಘವಾಗಿ ಪ್ರತಿಬಿಂಬಿತವಾಗಿದೆ. ಹರಿಸರ್ವೋತ್ತಮತ್ವವನ್ನು ಎತ್ತಿ ಹಿಡಿದಿರುವಂತೆಯೇ 'ವಾಯುಜೀವೋತ್ತಮ' ರೆಂದು ಕೊಂಡಾಡಿ ಮಧ್ವ ಸಿದ್ಧಾಂತವನ್ನು ಸಮರ್ಥವಾಗಿ ಪ್ರತಿಪಾದಿಸಿರುವ ಅವರು "ಬಾಣಸವಾಡಿಯ ಪ್ರಾಣದೇವ" ಎಂಬ ಭಜನಕೃತಿಯಲ್ಲಿ ತಮ್ಮ ಆರಾಧ್ಯ ದೈವವಾದ ಶ್ರೀ ಪ್ರಾಣದೇವರಸಮಗ್ರ ಲೀಲೆಯನ್ನು ಭಕ್ತಿ ಪೂರ್ವಕ ಕೊಂಡಾಡಿದ್ದಾರೆ.

ಈ ರೀತಿಯಾಗಿ, ತಮ್ಮ ಗುರುಗಳ ಅಭೀಷ್ಟದಂತೆ, ತಮ್ಮ ಸ್ವರೂಪ ಯೋಗ್ಯತೆಗೆ ಅನುಸಾರವಾಗಿ, ಪರಮಾತ್ಮನ ಪೆಚ್ಚಳವನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿ ಆ ಮೂಲಕ ಸಮಾಜವು ಆಸ್ತಿಕತೆಯ ಹಾದಿಯಲ್ಲಿ ನಡೆಯಲು ಸಹಾಯಕರಾಗಿರುವ ಇವರು ತಮ್ಮ ದಾಸ ದೀಕ್ಷೆಯ ಕರ್ತವ್ಯ ಪಾಲನೆಯಲ್ಲಿ ಯಶಸ್ವಿಯಾಗಿ ಸ್ತುತ್ಯಾರ್ಹರಾಗಿದ್ದಾರೆ.

Sri Vidyabharathi Book Centre, Bangalore

CC-O. In Public Domain. Digitized by eGangotri

ಅರ್ಪಣೆ

ಪೂಜ್ಯ ಗುರುಗಳಾದ ಶ್ರೀ ಶ್ರೀ
ಪರವಃಪ್ರಿಯ ಸುಬ್ಬರಾಯದಾಸವರೇಣ್ಯ
ತಂದೆ ಮುದ್ದು ಮೋಹನ ವಿಠಲದಾಸರ
ಪಾದಾರವಿಂದಗಳಲ್ಲಿಸಮರ್ಪಿತವಾದದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರ ಮಾತು

ಭಕ್ತಿಪೂರ್ವಕವಾದ ಹಾಗೂ ಸಾರ್ಥಕ ಸಾಹಿತ್ಯವೆನಿಸಬಹುದಾದ ಈ ಕೃತಿಯನ್ನು ಪ್ರಕಟಿಸಲು ನಮಗೆ ಅತ್ಯಂತ ಹರ್ಷವೆನಿಸುತ್ತವೆ. ಮಾನವ ಜನ್ಮದ ಸಾಧನೆಯು ಸಾಧನವಾಗಬಹುದಾದ ಈ ಬಗೆಯ ದೇವರ ನಾಮಗಳನ್ನು ಪ್ರತಿಮನೆಯಲ್ಲಿಯೂ ಹಾಡಿ, ಶ್ರೀಹರಿಯನ್ನು ಕೊಂಡಾಡಬೇಕೆಂಬ ನಮ್ಮ ಆಸ್ಥೆ ಇದೀಗ ಸಫಲವಾಗುತ್ತಿದೆ.

ದಾಸಪರಂಪರೆಯ ಅಪರಿಮಿತ ಸತ್ಯವನ್ನು ತಮ್ಮದೇ ಆದ ಧಾಟಿಯಲ್ಲಿ ನಮ್ಮ ಪೀಳಿಗೆ ಹಾಗೂ ಮುಂದಿನ ಪೀಳಿಗೆಗೆ ಸಮರ್ಪಿಸುತ್ತಿರುವ, ಆ ಮೂಲಕ ಹರಿಸರ್ವೋತ್ತಮತ್ವವನ್ನು ಸಾರೋದ್ಧಾರವಾಗಿ ಪ್ರತಿಪಾದಿಸುತ್ತಿರುವ ಈ ಲೇಖಕರಿಬ್ಬರಿಗೂ, ಶ್ರೀ ಹರಿಯಕರುಣೆ ಅನಂತಪಾರವಾಗಿರಲಿ ಎಂದಷ್ಟೇ ಆಶಿಸುತ್ತೇನೆ.

ಇದನ್ನು ಅಂದವಾಗಿ ಮುದ್ರಿಸಿರುವ ಶ್ರೀ ರವೀಟ್ರೇಡರ್ಸ್‌ನವರಿಗೂ, ಕೊಂಡು ಓದಿ, ಕೊಂಡಾಡುವ ತಮಗೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ

ಶುಕ್ಲಾಂ ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ

1 ಪೂರ್ವಿಕಲ್ಯಾಣಿ—ರೂಪಕ ತಾಳ

ನೋಡಿದೆ ನಾನಿಂದು ಬೇಗಾನೆ। ಕೊಂಡಾಡಿದೆನು ಗುರುಗಳನೂ ॥ಪ॥ ನೋಡಿ ಪಾಡಿ। ಕೊಂಡಾಡಿ ನಲಿದಾಡೀ ॥ಅ.ಪ॥ ಪಾಮರರಾದ ಈ ಜನರಿಗೆ। ರಾಮನಾಮದ ರಸವನ ॥ ಪ್ರೇಮದಿಂದಲಿ ನಮಗೆ। ನೇಮಿಸಿದ ಗುರುಗಳ॥೧॥ ಮುಂದರಧರ ಗೋವಿಂದನಾ। ಚಂದದಿಂದಲಿ ಪೂಜಿಸಿ। ಸಿಂಧುಶಯನ ಗೋವಿಂದನ ಸೇವೆ। ಗಾನಂದ ಪಡುವವರ॥೨॥ ಮಾಧವ ಮಧುಸೂದನನಾ। ಆದರದಿಂದಲಿ ಪೂಜಿಸೀ। ಮುದದಿಂದ ಪದುಮೇಶ ವಿಠಲನ ಪೂಜೆಯ। ಸದನದಿಂದಲೀ ಮಾಡಿದ ಗುರುಗಳ॥೩॥

2 ಸುರಟಿ—ಧೃವತಾಳ

ನಮಿಸುವೆ ಗುರುವರ್ಯಾ। ಚರಣಕೆ। ನಮಿಸುವೆ ಗುರುವರ್ಯಾ ॥ಪ॥ ಎರಗುವೆ ನಿಮ್ಮಾ । ಚರಣ ಕಮಲಗಳಿಗೆ। ಉರುಗೇಶರೆ ನೀವು। ಕರುಣೆಪುದೆಮ್ಮಾ ॥ಅ.ಪ॥ ಉದ್ಧಾರಕರೆಂದು ಎಮ್ಮೋಡಿ ಬಂದೆನು। ಬಿದ್ದಿರುವೆನು ನಿಮ್ಮಾ ಚರಣದಲೀ ತಂದೆ। ಮುದ್ದು ಮೋಹನಾ ಗುರುಗಳೆ ನೀವೂ। ಉದ್ಧರಿಸುವುದೂ ಎನ್ನ ಸ್ವರೂಪ॥೧॥ ಕರಿಗಿರಿಯಲ್ಲಿಹಾ ಸಿರಿನರಸಿಂಹನಾ। ಕರುಣವ ಪಡೆದೂ ಮೆರೆಯುತಿಹಾ। ಪರಮ ಪ್ರೀಯರೆ ನಿಮ್ಮಾ ಚರಣವ ನಂಬಿದೆ । ಪರಿಹರಿಸುವುದೆಮ್ಮಾ ದುರಿತ ರಾಶಿಗಳಾ ॥೨॥ ತಂದೆ ಗುರುವೆ ನಿಮಗೊಂದಿಪೆ ನಾನು ॥ ಇಂದು ಎನ್ನಯ ಭವ ಬಂಧನ ಬಿಡಿಸಿ । ಇಂದಿರಲೋಲ ವಿಠಲನ ರೂಪವ । ತಂದು ತೋರುವುದೆನ್ನ ಮನ ಮಂದಿರಕೆ ॥೩॥

3 ವಸಂತ— ಆದಿತಾಳ

ಕರುಣಾಕರಿ ಗಿರಿಜೇ। ಶರಣೆಂಬೆನು ತಾಯೆ ॥ಪ॥ ಹರನರಸಿಯೇ ನೀ। ಪರಮ ದಯಾಕರಿ ॥ ಪ್ರ ॥ ಪರಬೊಮ್ಮನ ಪೆಂಡ್ತರ। ಸೊಸಪುವ ಜ್ಞಾನಾ ।

Sri Vidyabharathi Foundation Trust, Sringeri

CC-O. In Public Domain. Digitized by eGangotri

ನಂದವ ಕರುಣಿಸು। ವಂದಿಪೆ ಜನಸೀ ॥೧॥ ಪತಿಸುತ ರೊಡಗೂಡಿ। ಅತಿಶಯ ದಿಂದಲಿ। ಸತತ ಪೂಜಿಸುವಂಥ। ಪತಿಭಾಗ್ಯವ ಕೊಡು॥೨॥ ರುದ್ರಾಣಿಯೆ ನೀ। ತಿದ್ದಿ ಎನ್ನ ಮನ। ಶುದ್ಧಳ ಮಾಡು। ಮುದ್ದು ಮುಂಗಳ ಗೌರಿ ॥೩॥ ಸುಂದರ ಗೌರಿ। ವಂದಿಪೆ ನಿನ್ನನು। ಇಂದಿರ ಲೋಲ। ವಿಠಲನ ತೋರೆ ॥೪॥

4 ಬೇಹಾಗ್—ಆದಿತಾಳ

ಬಾ ಸವಿ ಬೃಂದಾವನೆಯಾ। ಪೂಜಿಸುವಾ ॥ಪ॥ ಸುಣ್ಣ ಕಾರಣಿ ಹಚ್ಚಿ ಬೃಂದಾವನೆಗೆ। ಬಣ್ಣಗಳಿಂದಲಂಕರಿಸುತಲೀ। ಬೆಣ್ಣೆಯ ಕೃಷ್ಣನ ಚೆನ್ನೆ ಶ್ರೀ ತುಲಸಿಯ ಕಣ್ಣ ದಣಿಯ ನೋಡುವಾ ॥೧॥ ಮಿಗೆ ಹರುಷದಲೀ ಜಗುಲಿಯ ಸಾರಿಸಿ। ಬಗೆ ಬಗೆ ರಂಗೋಲಿಯನು ಬರೆದು। ನಗೆ ಮೊಗ ಕೃಷ್ಣಗು ಸ್ವಾಗಸಿನ ತುಲಸಿಗು। ನಗುನಗುತಲಿ ಆರತಿ ಎತ್ತುವಾ ॥೨॥ ಕದಳಿ ಕಂಬವನಿಟ್ಟು ಮುದದಿ ತೋರಣ ಕಟ್ಟಿ। ಪದುಮ ಕುಸುನು ಮುಂಟಪ ರಚಿಸೀ। ಮದನ ಮೋಹನಗೂ ಮುದ್ದು ತುಲಸಿಗೂ। ಕದಲಾರತಿ ಎತ್ತುವಾ ॥೩॥ ಉತ್ತುಮ ದಿನವಿದು ಉತ್ಥಾನ ದ್ವಾದಶಿ। ಮತ್ತೆ ನಾವೀಗ ಭಕ್ತಿಯಲೀ। ಚಿತ್ತ ಜನಯ್ಯಗೂ ನಿತ್ಯ ಮುಕ್ತಳಿಗೂ। ಮುತ್ತಿನಾರತಿ ಎತ್ತುವಾ ॥೪॥ ಬೃಂದಾವನೆಯನು ಇಂದು ಪೂಜಿಸಿದರೆ। ಬಂಧನ ಬಿಡಿಸೀ ನಮಗೀಗ। ಇಂದಿರ ಲೋಲ ವಿಠಲನ ಪಾದವ। ಚಂದದಿ ತೋರುವಳೂ ॥೫॥

5 ಭಜನೆ-ಪ್ರತಿ ನಾಲ್ಕನೇ ಚರಣವನ್ನು ಎರಡು ಸಲ ಹೇಳಬೇಕು.

(164 ಚರಣಗಳು)

ಬಾಣಸವಾಡಿಯ ಪ್ರಾಣದೇವ। ಏನಾನಂದವೊ ಪ್ರಾಣದೇವ॥ನಾನೊಂದಿಸುವೆನು ಪ್ರಾಣದೇವ। ಆನಂದ ವೀಯೋ ಪ್ರಾಣದೇವ ॥ ಅರಳೆಯ ಹೊಲದಲಿ ಪ್ರಾಣದೇವ। ಪರಿಸರ ನೀನಿರೆ ಪ್ರಾಣದೇವ। ಪರಿಶೋಭಿಸುತಲಿ ಪ್ರಾಣದೇವ। ಮೆರೆಯುತಲಿರುವೆ ಪ್ರಾಣದೇವ॥ ಪಾದದಿ ಗಂಗೆಯು ಪ್ರಾಣದೇವ।

CC-O. In Public Domain. Digitized by eGangotri

ಆದರದಲಿ ತಾ ಪ್ರಾಣದೇವ। ಪಾದಸೇವೆಯನು ಪ್ರಾಣದೇವ। ಮೋದದಿ
ಸೈವಳು ಪ್ರಾಣದೇವ॥ ಸುಂದರಮೂರ್ತಿ ಪ್ರಾಣದೇವ। ಅಂದದ ವಡೆ ಸರ
ಪ್ರಾಣದೇವ। ಚಂದದಿ ಧರಿಸಿದೆ ಪ್ರಾಣದೇವ। ವಂದಿಪೆ ನಿನಗೆ ಪ್ರಾಣದೇವ॥
ರಾಮನಾಮವ ಪ್ರಾಣದೇವ। ನೇಮದಿ ಜಪಿಸುವೆ ಪ್ರಾಣದೇವ। ಆ ಮಹಿಸುತೆಗೆ
ಪ್ರಾಣದೇವ। ಪ್ರೇಮದ ಪುತ್ರ ಪ್ರಾಣದೇವ॥ ಅಂಜನಗಿರಿಯಲಿ ಪ್ರಾಣದೇವ।
ಅಂಜನೆ ಕುವರ ಪ್ರಾಣದೇವ। ಸಂಜೀವರಾಯ ಪ್ರಾಣದೇವ। ಕಂಜನಾಭನ
ದಾಸ ಪ್ರಾಣದೇವ। ಹುಟ್ಟಿದ ಕೂಡಲೆ ಪ್ರಾಣದೇವ। ದಿಟ್ಟಿಸಿ ರವಿಯನು
ಪ್ರಾಣದೇವ। ಹೊಟ್ಟೆಗೆ ಹಣ್ಣೆಂದು ಪ್ರಾಣದೇವ।ಥಟ್ಟನೆ ಹಾರಿದಿ ಪ್ರಾಣದೇವ॥
ವಜ್ರಘಾತದಿ ಪ್ರಾಣದೇವ। ಜರ್ಝರ ನಾದೆಯೋ ಪ್ರಾಣದೇವ। ವಜ್ರಕಾಯ
ನಾದೆ ಪ್ರಾಣದೇವ। ಮೂರ್ಜಗದೊಳು ಖ್ಯಾತ ಪ್ರಾಣದೇವ॥ ಪಂಪಾಪತಿ ಸಖ
ಪ್ರಾಣದೇವ। ಸೊಂಪು ನೋಟದ ರಾಮ ಪ್ರಾಣದೇವ। ಸಂಪಿಗೆ ಮರದಡಿ
ಪ್ರಾಣದೇವ। ತಂಪಿಲಿ ಪವಡಿಸೆ ಪ್ರಾಣದೇವ॥ ದೂರದಿ ನೋಡಿದೆ ಪ್ರಾಣದೇವ।
ಸಾರಿ ಬಳಿಗೆ ಬಂದೆ ಪ್ರಾಣದೇವ। ಶ್ರೀ ರಾಮನೆ ಎಂದು ಪ್ರಾಣದೇವ।
ಶಿರಬಾಗಿ ನಮಿಸಿದೆ ಪ್ರಾಣದೇವ॥ ಚೆಣ್ಣ ಸೌಮಿತ್ರಿಯು ಪ್ರಾಣದೇವ।
ನಿನ್ನನೆ ನೋಡುತ ಪ್ರಾಣದೇವ। ನಿನ್ನನು ವರ್ಣಿಸಿದ ಪ್ರಾಣದೇವ। ತನ್ನ
ಅನುಜರೊಡನೆ ಪ್ರಾಣದೇವ॥ಸೌಮಿತ್ರಿಯ ಸಹಪ್ರಾಣದೇವ।ಭೂಮಿಜೆರಮಣ
ಪ್ರಾಣದೇವ। ರಾಮಚಂದ್ರ ನಿನ್ನ ಪ್ರಾಣದೇವ। ಪ್ರೇಮದಿ ಕೂಡಿದ ಪ್ರಾಣ
ದೇವ॥ ಅನುಜ ರೀರ್ವರ ಪ್ರಾಣದೇವ। ಅನುನಯದಿಂದಲಿ ಪ್ರಾಣದೇವ।ವಾನರ
ಪತಿಗೆ ಪ್ರಾಣದೇವ।ವಿನಯದಿತೋರಿದೆ ಪ್ರಾಣದೇವ।ರಾಮ ಸುಗ್ರೀವರು ಪ್ರಾಣ
ದೇವ।ಪ್ರೇಮ ಸಖ್ಯವು ಮಾಡಿ ಪ್ರಾಣದೇವ। ನೇಮಿಸಿದರು ನಿನ್ನ ಪ್ರಾಣದೇವ।
ಭೂಮಿಜೆ ಅರಸೆಂದು ಪ್ರಾಣದೇವ॥ ಶರಧಿಯ ತೀರದಿ ಪ್ರಾಣದೇವ। ವರ
ಕಪಿವರರು ಪ್ರಾಣದೇವ। ಪರಿ ಪರಿ ಯೋಚಿಸಿ ಪ್ರಾಣದೇವ। ಸರಿ ನೀನೆಂದರು
ಪ್ರಾಣದೇವ॥ ತೂಗುತ ಪೈಯನು ಪ್ರಾಣದೇವ। ಬಾಗುತ ಬೆಳೆದೆಯೋ
ಪ್ರಾಣದೇವ। ವೇಗದಿ ದಾಟಿದೆ ಪ್ರಾಣದೇವ। ಸಾಗರವನು ನೀ ಪ್ರಾಣದೇವ॥
ಲಂಕಾದ್ವಾರದಲೀ ಪ್ರಾಣದೇವ। ಲಂಕಿಣಿಯನು ಗೆದ್ದು ಪ್ರಾಣದೇವ।ಲಂಕೆಯ
ಒಳಪೊಕ್ಕು ಪ್ರಾಣದೇವ। ಪಂಕಜಾಕ್ಷಿಯ ನರಸಿ ಪ್ರಾಣದೇವ॥ ಎಲ್ಲೆಡೆ
ಹುಡುಕಿದೆ ಪ್ರಾಣದೇವ। ಎಲಿಯು ಕಾಣದೆ ಪ್ರಾಣದೇವ। ಪುಲ್ಲನಾಭನ ಸತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಣದೇವ। ಎಲ್ಲಿಹಳೆನುತಿದ್ದೆ ಪ್ರಾಣದೇವ॥ ಶೃಂಗಾರ ವನದಿಂದ ಪ್ರಾಣದೇವ॥
ತಂಗಾಳಿ ಬೀಸಲು ಪ್ರಾಣದೇವ। ಅಂಗನೆ ಇಹಳೆಂದು ಪ್ರಾಣದೇವ। ಭಂಗನೆ
ಹಾರಿದಿ ಪ್ರಾಣದೇವ॥ ಆತುರದಿಂದಲಿ ಪ್ರಾಣದೇವ। ಸೀತಾ ದೇವಿಯ
ಕಂಡು ಪ್ರಾಣದೇವ। ಮಾತೆ ಶೋಕವ ನೋಡಿ ಪ್ರಾಣದೇವ। ಪ್ರೀತಿ
ಉದ್ರೇಕಿಸೆ ಪ್ರಾಣದೇವ। ತಾಯಿ ಕೇಳಮ್ಮ ಎಂದು ಪ್ರಾಣದೇವ। ಕಾಯುವ
ನಮ್ಮ ರಾಮ ಪ್ರಾಣದೇವ। ನೋಯದಿರೆಂದು ಪ್ರಾಣದೇವ। ತಾಯಿಗೆ
ನಮಿಸಿದೆ ಪ್ರಾಣದೇವ॥ ಉಂಗುರ ವೀಯಲು ಪ್ರಾಣದೇವ। ಕಂಗಳಿಗೊತ್ತಿ
ದಳು ಪ್ರಾಣದೇವ। ರಂಗ ಧಾಮನ ನೆನೆದು ಪ್ರಾಣದೇವ। ಕಂಗಳು ತುಂಬಿ
ದಳು ಪ್ರಾಣದೇವ॥ ದಾನವಾಂತಕ ರಾಮ ಪ್ರಾಣದೇವ। ದೀನಳಾದೆನ್ನ
ಕಾಯೋ ಪ್ರಾಣದೇವ। ಜಾನಕಿ ದೇವಿಯು ಪ್ರಾಣದೇವ। ಧ್ಯಾನಿಸುತ್ತಿದ್ದಳು
ಪ್ರಾಣದೇವ॥ ವಾನರ ರೂಪಗು ಪ್ರಾಣದೇವ। ಗುಣಧಾಮ ರಾಮನಿಗೂ
ಪ್ರಾಣದೇವ। ಏನಿದು ಸಖ್ಯವು ಪ್ರಾಣದೇವ। ಏನು ಸೋಜಿಗವು ಪ್ರಾಣದೇವ
ಹಿಂದಿನ ಚರಿತೆಯ ಪ್ರಾಣದೇವ॥ ಇಂದು ಮುಖಿಗೆ ಪೇಳ್ದೆ ಪ್ರಾಣದೇವ।
ಮುಂದಿನ ಕಾರ್ಯಕೆ ಪ್ರಾಣದೇವ। ನಿಂದಿಹ ರಾಮನೆಂದೆ ಪ್ರಾಣದೇವ।
ಮೂಡಿದ ಹರುಷದಿ ಪ್ರಾಣದೇವ। ಚೂಡಾಮಣಿಯನಿತ್ತು ಪ್ರಾಣದೇವ।
ಮಾಡೆಂದು ತೀವ್ರದಿ ಕಾರ್ಯ ಪ್ರಾಣದೇವ। ಬೇಡಿದೆನೆಂದು ಪೇಳು
ಪ್ರಾಣದೇವ॥ ಉಪವಾಸವೆಂದೆಯೋ ಪ್ರಾಣದೇವ। ಅಪಾರ ಕ್ಷುದೆ ಎಂದೆ
ಪ್ರಾಣದೇವ। ಕೃಪೆ ಮಾಡೆಂದೆಯೋ ಪ್ರಾಣದೇವ। ಈ ಪರಿ ನುಡಿಕೇಳಿ
ಪ್ರಾಣದೇವ॥ ಕಳಿತಿಹ ಫಲ ಒಂದು ಪ್ರಾಣದೇವ। ಕೆಳಗೆ ಬಿದ್ದಿಹುದನು
ಪ್ರಾಣದೇವ। ತಿಳಿಸದೆ ಭುಂಜಿಸಿ ಪ್ರಾಣದೇವ। ಗಲಭೆ ಮಾಡದೆ ಪೋಗೆನಲು
ಪ್ರಾಣದೇವನು॥ ಮನದಲಿ ಹರುಷಿಸಿ ಪ್ರಾಣದೇವ। ಜಾನಕಿಗೆರಗಿ ಪ್ರಾಣದೇವ॥
ವನವನು ಮುರಿಯುತ ಪ್ರಾಣದೇವ। ವನಭಟರನು ತರಿದೆ ಪ್ರಾಣದೇವ।
ಥಟ್ಟನೆ ಇಂದ್ರಜಿತು ಪ್ರಾಣದೇವ। ಸೃಷ್ಟಿ ಕರ್ತನ ಬೇಡಿ ಪ್ರಾಣದೇವ।
ಕಟ್ಟಿ ಅಸ್ತ್ರದಿ ನಿನ್ನ ಪ್ರಾಣದೇವ॥ ಮಟ್ಟಿಯಂತೆ ತಂದ ಪ್ರಾಣದೇವ।
ಏನೆಲೋ ವಾನರ ಪ್ರಾಣದೇವ। ನೀನೇಕೆ ಬಂದಿಹೆ ಪ್ರಾಣದೇವ। ವನವನು
ಮುರಿಯಲು ಪ್ರಾಣದೇವ। ಏನು ಕಾರಣವೋ ಪ್ರಾಣದೇವ॥ ಕೇಳೆಲೋ

CC-O. In Public Domain. Digitized by eGangotri

ರಾವಣ ಪ್ರಾಣದೇವ। ಪೇಳಿ ಪೋಗಲು ಬಂದೆ ಪ್ರಾಣದೇವ। ನಾಳೆ ಲಂಕೆಗು
ನಿನಗು ಪ್ರಾಣದೇವ। ಗೋಳು ತಪ್ಪದು ಎಂದೆ ಪ್ರಾಣದೇವ॥ ಬಾಲಕೆ ಬಟ್ಟಿ
ಸುತ್ತಿ ಪ್ರಾಣದೇವ। ಬಾಲ ಬೆಳೆಯುತಿರೆ ಪ್ರಾಣದೇವ। ಬಾಲೆಯರುಟ್ಟಿರುವ
ಪ್ರಾಣದೇವ। ಶಾಲೆ ಸೆಳೆದು ತನ್ನಿರೆನ್ನೆ ಪ್ರಾಣದೇವ॥ ಆಲಿಸಿ ನುಡಿಯನು
ಪ್ರಾಣದೇವ। ಬಾಲ ಮುದುರಿಕೊಂಡೆ ಪ್ರಾಣದೇವ। ತೈಲದೊಳದ್ದಿದರು
ಪ್ರಾಣದೇವ। ಬಾಲಕೆ ಬೆಂಕಿ ಇಡಲು ಪ್ರಾಣದೇವ॥ ಮನದಲಿ ರಾಮಗೆ
ಪ್ರಾಣದೇವ। ವಿನಯದಿ ವಂದಿಸಿ ಪ್ರಾಣದೇವ। ಮನೆ ಮನೆ ಹಾರುತ
ಪ್ರಾಣದೇವ। ಕನಕ ನಗರಿ ಸುಟ್ಟಿ ಪ್ರಾಣದೇವ॥ ಸುಟ್ಟು ಲಂಕೆಯನು
ಪ್ರಾಣದೇವ। ಥಟ್ಟನೆ ಬಂದೆಯೋ ಪ್ರಾಣದೇವ। ಗಟ್ಟಿ ಹನುಮ ನೀನೆ
ಪ್ರಾಣದೇವ। ದಿಟ್ಟ ರಾಮನ ದೂತ ಪ್ರಾಣದೇವ॥ ಮುದದಿ ವಾನರ ಕೂಡಿ
ಪ್ರಾಣದೇವ। ಮಧುವನ ಕೈತಂದೆ ಪ್ರಾಣದೇವ। ಮಧುರ ಫಲವನು
ಪ್ರಾಣದೇವ।ನುದದಲಿ ಭುಂಜಿಸಿ ಪ್ರಾಣದೇವ॥ ರಾಮಗೆ ವಂದಿಸಿ ಪ್ರಾಣದೇವ।
ಪ್ರೇಮ ಮಾಣಿಕ ವಿತ್ತೆ ಪ್ರಾಣದೇವ। ಈ ಮಹಿಯೊಳಗೆ ಪ್ರಾಣದೇವ।
ಸೌಮ್ಯರ ಕಾಣೆ ನಿನಗೆ ಪ್ರಾಣದೇವ। ಲೋಕ ಗುರುವೆ ನೀ ಪ್ರಾಣದೇವ
ನೀ ಕಯ್ಯ ಬಿಡದಿರು ಪ್ರಾಣದೇವ। ಆ ಕೈವಲ್ಯಕೆ ಪ್ರಾಣದೇವ। ನೀ ಕರೆ
ದೊಯ್ಯ ಬೇಕು ಪ್ರಾಣದೇವ। ಸುಂದರ ಮೂರ್ತಿ ಪ್ರಾಣದೇವ। ವಂದಿಪೆ
ನಿನಗೆ ಪ್ರಾಣದೇವ। ಇಂದಿರ ಲೋಲ ವಿಠಲಗೆ ಪ್ರಾಣದೇವ।ಕಂದ ನೀನಾಗಿಹೆ
ಪ್ರಾಣದೇವ॥ ಮಂಗಳ ರಾಮಗೆ ಪ್ರಾಣದೇವೆ। ಮಂಗಳ ಜಾನಕಿಗೆ
ಪ್ರಾಣದೇವ। ಮಂಗಳ ಹನುಮಗೆ ಪ್ರಾಣದೇವ। ಮಂಗಳ ಜಗಕೆಲ್ಲ ಪ್ರಾಣದೇವ॥

6 ಮುಖಾರಿ — ರೂಪಕತಾಳ

ಸಿರಿದೇವಿ ನೀ ಬಂದು। ಕಣ್ ತೆರೆದು ನೋಡು। ವರಲಕ್ಷ್ಮಿ ನೀಸಿಂದು
ಕೃಪೆಯನ್ನು ಮಾಡು ॥ಪ॥ ಏಕೆ ಕೋಪವೆ ತಾಯೆ। ಲೋಕ ಮಾತೆಯೆ
ನಿನಗೆ। ನೀ ಕೃಪೆಯ ಮಾಡಮ್ಮೊಡೆ। ಸಾಕು ಜೀವನಯಾತ್ರೆ ॥೧॥ ಎನ್ನ
ಅಪರಾಧಗಳ। ಮನ್ನಿಸುವುದು ತಾಯೆ। ನಿನ್ನೊಲುಮೆ ಯಾಗದಿರೆ। ಇನ್ನಾರು
ಗತಿಯೆ ॥೨॥ ನಿನ್ನ ಪೂಜಿಸುತಿರುವೆ। ನಿನ್ನ ಧ್ಯಾನಿಸುತಿರುವೆ। ನಿನ್ನ ಪಾಡುತ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿರುವೆ। ಎನ್ನ ನೀ ನೋಡುತಿರುವೆ ॥೩॥ ಪರಮ ಭಕ್ತಿಲಿ ನಿನ್ನ। ವರಲಕ್ಷ್ಮಿ ಪೂಜಿಪೆನೆ। ಪರರ ಬೇಡದ ತೆರದಿ। ವರವ ನೀಡೌ ದೇವಿ ॥೪॥ ಮನಸಿಜನ ಮಾತೆ ನೀ। ಕನಸಿನಲಿ ಬಾರಮ್ಮ। ವನಜಾಕ್ಷಿ ಶ್ರೀ ಲಕ್ಷ್ಮೀ। ಮನದಣಿಯ ನೋಳ್ಪೆ ॥೫॥ ಮಾಘಮಾಸದ ಶುದ್ಧ ಪೌರ್ಣಮಿ ತಿಥಿಯಲ್ಲಿ। ಶ್ರೀ ಗುರು ಗಳಾ ಪತ್ನಿಯಾ ರೂಪದಲ್ಲೀ। ಶ್ರೀ ಶುಕ್ರವಾರದಾ ಶುಭ ದಿವಸದಲ್ಲೀ। ಶ್ರೀಶನಾ ಸತಿ ಲಕ್ಷ್ಮಿ ಬಂದಳೂ ಮನೆಗೇ। ಬಂದವರೀಗಭಿ ವಂದನಂಗಳ ಮಾಡಿ। ಮುಂದ ಹಾಸದಿ ತಂದು ಪೀಠವನು ಕೊಡುತಾ। ಇಂದು ವದನೆಯರ ಕರೆ ತಂದು ಕುಳ್ಳಿರಿಸುತಲಿ। ನಿಂದು ಭಕ್ತಿಯಲಿವರ ಕುಶಲವನು ಕೇಳೀ ॥ ಸಿರಿಲಕ್ಷ್ಮಿ ವರಲಕ್ಷ್ಮಿ ಎಂತೆರಡು ರೂಪದಲಿ। ಹರಿರಾಣಿ ಬಂದಿಹಳು ಕರುಣೆಯಿಂದೀಗ ॥ ನಡೆದು ಬಂದಿಹರವರು ಬಡವರಾ ಮನೆಗೀಗ ಕೊಡುವೆ ನೇನನು ಎನುತ ಕಡುನೊಂದು ಮನದಿ। ಹೃದಯ ತಲ್ಲಣಗೊಂಡು ಮಾಧವನ ನೆನೆಯಲು ಯದುನಾಥನಾ ದಯದಿ ಮುದವಾಯ್ತು ಮನಕೆ ಕವಳಿ ಫಲ ಸಕ್ಕರೆಯು।ದಧಿ ಕ್ಷೀರ ಬೆರೆಸುತಲಿ ಮುದದಿಂದ ಅಮೃತವನು ತೃಷೆಗೆ ಕೊಡಲಾಗ ಅಂಬು ಜಾಕ್ಷಿಯರಾಗ ಸಂಭ್ರಮದಿ ಸವಿಯುತಿರೆ ತುಂಬಿ ಬಂದಿತು ಹೃದಯ ಆನಂದ ದಿಂದ ಬಂದವರೀಗೆ ನಾ ತಂದು ತಳಿಗೆಯಲೀ ಗಂಧ ಕುಂಕುಮ ಪುಷ್ಪ ತಾಂಬೂಲ ಕೊಡಲೂ ಹಿಂದೆ ನಿಂದಿಹ ಎನ್ನ ಹಿರಿಮಾತೆ ಪೇಳಿದರು ಕಂದ ನೀ ಕೇಳಮ್ಮ ಹಿತವಾಕ್ಯವನ್ನು ॥ ಮುತ್ತೈದೆ ಇವರಿಗೆ ಹತ್ತು ಪಡಿ ಅಕ್ಕಿಯನ್ನು ಮತ್ತೆ ಕುಪ್ಪಸ ಸಹಿತ ಉಡಿಯ ತುಂಬೆನಲೂ ಹಿತವಾಕ್ಯ ಕೇಳುತಲೆ ಅತಿಹರುಷ ವಾಯಿತು ಪ್ರೀತಿಯಲಿ ಮಾತೆಗೇ ಆಣತಿಯ ಕೊಡಲೂ ಉಡಯ ಕೋಳಯು ಕೂಗೇ ಉದಿಸಿದನು ಸೂರ್ಯತಾ ಮುದದಿಂದಲೆದ್ದೆತ್ತು ಮಾಧವನ ನೆನೆದು ಕನಸು ನೆನೆಯುತಲಿರಲು ಮನಸು ಹರುಷದಲುಬ್ಬಿ ವನಜಾಕ್ಷಿ ಶ್ರೀ ಲಕ್ಷ್ಮಿ ದಯವಾಯ್ತು ನಮಗೆ ॥ ಅಂಬುಜಾಕ್ಷಿಯ ನೆನೆದು ತುಂಬಿ ಬಂದಿತು ಹೃದಯ ಕಂಬನಿಯು ಸುರಿಯಿತೂ ಆನಂದದಿಂದಾ॥ ಬಂದೆಯೇನಮ್ಮಾ ಬಡವರಾ ಮನೆಗೀಗ ಸಿಂಧು ನಂದನೆ ನೀನು ಬಂದೆಯೇನಮ್ಮಾ ಪೂಜಿಪೆ ನಮ್ಮಾ ಪಾದ ಗಳಿಗೆ ರಾಜೀವ ನೇತ್ರೆ ನಿನ್ನ ಪೂಜಿಪೆ ನಮ್ಮಾ ಶಕುತಿ ಇಲ್ಲವು ಎನಗೆ ನೀ ಕೇಳು ಅವ್ವಾ ಭಕುತಿ ಪೂಜೆಯ ಮಾಳ್ಪೆ ಕೊಳ್ಳು ಲಕುಮವ್ವಾ ಹರಿಪಾದ

CC-O. In Public Domain. Digitized by eGangotri

ಸ್ಮರಣೆಯನು ಮರೆಸದೀರವ್ವಾ ಹರಿರಾಣಿ ಕರುಣದಿಂ ಕಾಯ ಬೇಕವ್ವಾ ಭಕುತಿ ಭಾಗ್ಯವ ನಾನು ಬೇಡುವೆ ನವ್ವಾ ಮುಕುತ ಕೊಡೆಯಳೆ ನೀನು ನೀಡ ಬೇಕವ್ವಾ ಶರಣು ಶರಣು ಎಂದು ಶರಣೆಂಬೆ ನವ್ವಾ ಶರಣ ಜನರೊಳ ಗನ್ನ ಇರಿಸಬೇಕವ್ವಾ ವಾಸುದೇವನ ರಾಣಿ ಕೇಳು ಬಿನ್ನಪವಾ ದಾಸಿ ಎಂಬುದ ನೀನು ಮರೆಯ ದೀರವ್ವಾ। ಪಾಲಯಮಾಂ ಶ್ರೀ ಪಾಲಯಮಾಂ ಪಾಲಯ ಮಾಂ ಶ್ರೀ ಪಾಲಯ ಮಾಂ ॥ಪ॥ ಶ್ರೀ ಮಹಲಕ್ಷ್ಮಿ ಪಾಲಯ ಮಾಂ ಶ್ರೀ ವರಲಕ್ಷ್ಮಿ ಪಾಲಯ ಮಾಂ ನಮಿಸುವೆ ಲಕ್ಷ್ಮಿ ಪಾಲಯಮಾಂ ನಮೊ ನಮೊ ಲಕ್ಷ್ಮಿ ಪಾಲಯ ಮಾಂ ॥ಅ. ಪ॥ ಅಂಬುಜ ಸಂಭವೆ ಶ್ರೀ ಲಕ್ಷ್ಮಿ ಅಂಬುಜ ಪಾಣಿ ಜಯಲಕ್ಷ್ಮಿ ಅಂಭ್ರಣಿ ದೇವೀ ಮಹಲಕ್ಷ್ಮಿ ನಂಬಿದ ಎನ್ನನು ಕಾಯೌ ಲಕ್ಷ್ಮಿ ॥೧॥ ಕರಿಗಿರಿಯಲ್ಲೀ ಶ್ರೀ ಲಕ್ಷ್ಮೀ ಕರವೀರ ಪುರದಲ್ಲಿ ಸಿರಿ ಲಕ್ಷ್ಮೀ ನರಹರಿ ತೊಡೆಯಲ್ಲಿ ರಾಜ್ಯಲಕ್ಷ್ಮೀ ವರ ದಪ್ರದಾಯಿನಿ ವರಮಹಲಕ್ಷ್ಮೀ ॥೨॥ ಸ್ವರ್ಗಾದಿ ದೇವತೆ ಶ್ರೀ ಲಕ್ಷ್ಮೀ ದುರ್ಗಾದೇವಿ ಜಯಲಕ್ಷ್ಮಿ ॥ ಭಾರ್ಗವಿ ದೇವೀ ಬಾತ್ ಲಕ್ಷ್ಮೀಭಾಗ್ಯ ದಾಯಿನಿ ಭಾಗ್ಯಲಕ್ಷ್ಮೀ ॥ ೩ ಶುಕ್ರವಾರದ ಶುಭಲಕ್ಷ್ಮೀ ।ಜೊಕ್ಕಸ ಭಾಗ್ಯದ ಜಯಲಕ್ಷ್ಮೀ । ಅಕ್ಕರದಲಿ ನೀ ಬಾರೌ ಲಕ್ಷ್ಮಿ। ಮಕ್ಕಳು ಮರಿಗಳ ಹರಸೌ ಲಕ್ಷ್ಮೀ ॥೪॥ ಸಿಂಧುನಂದನೆ ಶ್ರೀ ಲಕ್ಷ್ಮೀ ।ಇಂದಿರಾದೇವಿ ಜಯಲಕ್ಷ್ಮೀ ಇಂದಿರಾಲೋಲ ವಿಠಲಗೆ ಲಕ್ಷ್ಮೀ । ಅಂದದ ರಾಣಿ ಜಯ ಲಕ್ಷ್ಮೀ ॥೫॥

7 ಆಠಾಣ—ರೂಪಕತಾಳ

ಬಾರಮ್ಮ ಭಾಗ್ಯಲಕ್ಷ್ಮೀ ಕಾರುಣ್ಯಸಿಧಿಯೇದೇವಿ । ತೋರಮ್ಮ ನಿನ್ನ ರೂಪ ಸಾರಮ್ಮ ನಡೆದು ಮನೆಗೇ ॥ಪ॥ ಪಾದಾವ ತೊಳೆದು ನಾನೂ । ಪಾದೋದುಕವನ್ನು ಶಿರದೀ । ಮೋದದಿ ಧರಿಸುವೆನೂ । ಮಾಧವ ನರ ಲಕ್ಷ್ಮೀ ॥೧॥ ಹರಿದ್ರ ಕುಂಕುಮವನೂ ।ಪರಿಮಳ ಗಂಧವನ್ನೂ । ಪರಿಪರಿ ಪುಷ್ಪವನ್ನೂ । ವರಲಕ್ಷ್ಮಿ ಪೂಜಿಸುವೆನೂ ॥೨॥ ರಾಜೀವ ನೇತ್ರೆ ನಿನಗೇ । ಜಾಜಿ ಮಾಲೆಯನು ಹಾಕಿ । ಕೂಜೆ ಮುಲಿಗೆಯ ಮುಡಿಪೇ ಮೂಜ

Sri Vidyabharathi Book Centre, Sringeri

CC-O. In Public Domain. Digitized by eGangotri

ಗನ್ಮಾತೆ ಲಕ್ಷ್ಮೀ ॥೩॥ ದೀಪಾವ ಹಚ್ಚಿ ನಾನೂ । ಧೂಪಾವು ಬೆಳಗುವೆನೂ । ಕಾಪಾಡು ಎನುತ ಬೇಡೀ । ಶ್ರೀಪಾದಕೆರಗುವೆನೂ ॥೪॥ ಭಕ್ಷ ಪಾಯಸವು ಮಾಡೀ । ಕೃಷ್ಣಾರ್ಪಣವು ಎಂದೂ ।ಲಕ್ಷ್ಮೀ ನಿಮಗರ್ಪಿಸುವೇನು । ರಕ್ಷಿಸು ನಮ್ಮನೆಲ್ಲಾ ॥೫॥ ಮಾರನ ಮಾತೆ ನಿನಗೇ। ಆರುತಿ ಬೆಳಗುವೆನೂ । ಪಾರಿಜಾತಾದ ಕುಸುಮ । ನೀರೇ ನೀ ದಯದಿ ನೀಡೇ ॥೬॥ನಮಿಸುವೆ ನಿನಗೆ ಮಾತೇ। ಕ್ಷಮಿಸೆನ್ನ ಲೋಕ ಮಾತೆ । ರಮೆಯೆ ನೀನೆನಗೆ ದಾತೇ ।ಕಮಲಾಕ್ಷಿ ಜಗದ್ವಿಖ್ಯಾತೇ ॥೭॥ ನಶವಾವೆ ನಿನಗೆ ಮಾಯೇ । ಶಶಿ ಮುಖಿ ಎನ್ನ ಕಾಯೆ। ಕುಸುಮವ ನೀಡು ತಾಯೆ । ಬಿಸಜಾಕ್ಷಿ ಭಕುತಿಯೀಯೇ ॥೮॥ ನಳನಾಕ್ಷಿ ಲಕ್ಷ್ಮೀ ನಿಮಗೆ । ಬಳಿಯನ್ನು ತೊಡಿಸುವೆನು । ಗಳಿತ ಖರ್ಜೂರ ದ್ರಾಕ್ಷಿ। ಫಲಗಳ ಉಡಿಯಲಿಡುವೆ ॥೯॥ ಇಂದಿರ ದೇವಿ ನೀ ತಾಯಿ । ಇಂದಿರ ಲೋಲ ವಿಠಲ । ತುಂಬೆಯು ಎಂದು ತಿಳಿವೆ । ಬಂದು ನೀ ಸಲಹು ದೇವಿ ॥೧೦॥

8 ನವರೋಜು ರಾಗ—ರೂಪಕತಾಳ

ಬಾರಮ್ಮ ಸಿರಿಯೆ ನೀ ಮನೆಗೆ । ಬಾರಮ್ಮ ಭಾಗ್ಯ ದೇವತೆಯೆ ಸಾರಸನೇತ್ರಿ ದಯದಿಂದಾ । ನೀರಜ ಗಂಧಿ ಬಾರಮ್ಮಾ ॥೧॥ ಶುದ್ಧ ಭಾವದಿನಾ ಕರೆಯುವೆನೂ । ಮುದ್ದು ಮಹಲಕ್ಷ್ಮೀ ಬಾರಮ್ಮಾ । ಮುದ್ದು ಕೃಷ್ಣನ ಕೂಡಿ ಬಾರಮ್ಮಾ ॥ ಗದ್ದುಗೆ ಮೇಲೆ ಕೂಡಮ್ಮಾ ॥೨॥ ಅಂಗಳವನ್ನೂ ಸಾರಿಸುವೇ । ರಂಗನಲ್ಲಿಯನು ನಾನಿಡುವೇ । ಶೃಂಗಾರ ಮಂಟಪ ॥ ರಚಿಸುವೆ । ರಂಗಾನ ಸಹಿತ ಬಾರಮ್ಮಾ ॥೩॥ ಮಂಗಳ ಸ್ನಾನವು ಮಾಡುವೆನು । ಮಂಗಳವಸ್ತ್ರವ ಧರಿಸುವೆನು ಮಂಗಳ ಕುಸುಮ ಮುಡಿಯುವೆನು । ಭೃಂಗಾ ಕುಂತಲೆ ನಿನ್ನ ಪೂಜಿಸೆನೂ ॥೪॥ ಶ್ರಾವಣ ಶುಕ್ರ ವಾರದಲೀ । ಶ್ರೀ ವಾಸು ದೇವನ ಸಹಿತಾಗೀ । ಭಾವೆ ಮಹಲಕ್ಷುಮಿ ಬಾರಮ್ಮಾ ॥ ಭಾವ ಭಕುತಿಯನ್ನು ನೀಡಮ್ಮಾ ॥೫॥ಹಾಕುವೆನ್ಯೈದು ಫಲವನ್ನೂ ।ನಾಲ್ತೆಂಟು ದೀವಿಗೆ ಹಚ್ಚುವೆನು । ಶ್ರೀ ಕಾಂತೆ ಬಂದು ನೆಲಸಮ್ಮಾ । ಏಕ ಭಕ್ತಿಯಲೀ ಪೂಜಿಸುವೇ ॥೬॥ ಶುದ್ಧಾಶ ಸ್ನಾನವ ಮಾಡುವೆನೂ । ಶುದ್ಧೋದ ಕವಿ ನಿನ್ನ ಪೂಜಿಪೆನು ।

CC-O. In Public Domain. Digitized by eGangotri

ಶ್ರದ್ಧಾ ಭಕ್ತಿಯಲೀ ಬೇಡುವೆನು । ಬುದ್ಧಿ ನಿನ್ನಲ್ಲೂ । ನಿಲಿಸಮ್ಮಾ ಒ ರಲ್ಲಿ ವಸ್ತ್ರವನು ನಾ ನುಡಿಸುವೆನೂ । ಅರಿಶಿನ ಕುಂಕುಮ ಹಚ್ಚುವೆನೂ । ಪರಿಮಳ ಗಂಧ ಪೂಸುವೆನೂ । ಮುರುಗ ಮಲ್ಲಿಗಿ ಜಾಜಿ ಮುಡಿಸುವೆನೂ ॥೮॥ ಸಿರಿ ದೇವಿ ನಿನ್ನ ಕೊರಳಿಗೆ । ಸುರಗೀ ಮಾಲೆಯನು ಹಾಕುವೆನು । ವರ ಧೂಪ ದೀಪ ಬೆಳಗುವೆನೂ । ವರಲಕ್ಷ್ಮಿ ಉಡಿಯ ತುಂಬುವೆನೂ ॥೯॥ ಪಕ್ಷಿ ವಾಹ ನಾ ಸತಿ ನಿನಗೆ । ಲಕ್ಷ್ಮಿದೇವಿಯೇ ಬಳೆ ತೊಡಿಸುವೆನೂ । ಭಕ್ಷ ಪಾಯಸವ ಬಡಿಸುವೆನೂ । ಲಕ್ಷ್ಮೀ ನಿನಗೆ ವೀಳ್ಯ ಕೊಡುವೆನೂ ॥೧೦॥ ಮುತ್ತಿನಾರ ತಿಯ ಬೆಳಗುವೆನೂ । ಮುತ್ತೈದೆ ತನವಾ ಬೇಡುವೆನೂ । ಪುತ್ರಾರ ಪತಿಯ । ಸಲಹಮ್ಮಾ । ಮತ್ತೆ ಭಕುತಿಯಾ ನೀಡಮ್ಮಾ ॥೧೧॥ ಒಡೆಯ ವೆಂಕಟನಾ ಮಡದಿಯೇ । ಮುಡಿಯ ಬಾಗುವೆ ನಿನ್ನಡಿಯಲ್ಲೀ । ಬೇಡುವೆ ನಿನ್ನಾ ಸೆರ ಗೊಡ್ಡೀ । ನೀಡಮ್ಮ ಭಕುನಿ ಭಾಗ್ಯವೂ ॥೧೨॥ ಇಂದಿರಾ ದೇವಿ ಕೃಪೆ ಇಂದು ಬಂಧನ ಬಿಡಿಸು ಭವದಿಂದ । ಇಂದಿರ ಲೋಲ ವಿಠಲನಾ । ಚಂದಾದ ಪಾಪ ತೋರಮ್ಮಾ ॥೧೩॥

9 ಮೋಹನ—ಆದಿತಾಳ

ನಡೆದು ಬಾ ತಾಯಿ ನಡೆದು ಬಾ ತಾಯಿ ನಡೆದು ಬಾ ॥ಪ॥ ಬಡ ನಡುವು ಬಳುಕುತ್ತ । ಮುಡಿದ್ಹೂವು ಉದುರುತ್ತ । ಒಡೆಯ ವೆಂಕಟನರಸಿ । ನಡೆದು ಬಾ ॥೧॥ ॥ಅ.ಪ.॥ ಜರಿಯ ಸೀರಿಯನುಟ್ಟು । ಜರಿಯ ಕಂಚುಕ ತೊಟ್ಟು ಸಿರಿ ವಿನ್ನ ಪಾದದಲಿ । ನೆರಿಗೆಗಳ ಚಿಮ್ಮುತಾ ಸರಸಿ ಜೋಡ್ಬವೆ ಲಕುಮಿ । ಸರಸಿ ಜಾದಳನೇತ್ರಿ ಸಿರಿ ಮೊಗದ ಚೆಲ್ವಿಕೆಯ । ವರಲಕ್ಷ್ಮಿ ದೇವಿ ನೀ ॥೧॥ ಗೆಜ್ಜೆಯಾ ಪಾದವನು । ಧ್ವನಿ ಮಾಡುತಾ । ಹೆಜ್ಜೆಯಾ ಮೇಲೆ ನೀ । ಹೆಜ್ಜೆ ಇಡುತಾ ಮೂರ್ಜಗಾ ದೊಡೆಯ । ನಾರಾಯಣನ ಲಕುಮಿ । ಸಜ್ಜನರ ಮನೆಗೆ ನೀ । ಗಜ ಗಮನದಿಂದಾ ॥೨॥ ಹರಡಿ ಕಂಕಣದ್ವಾರ ಹಸ್ತ ಕಡಗಾ । ಮೆರೆವ ಮಂಕೆ ನಾಗ ಮುರಗಿ ಬಾಜು ಬಂದು । ವರ ನಡುವಿಲೊ ಪ್ಪುವಾ ವಡ್ಯಾಣ ಸೊಬಗಾ । ಹಾರ ಪದಕವು ಸರಿಗೆ ಕೊರಳಲ್ಲಿ ಧರಿಸಿ ನೀ

CC-O. In Public Domain. Digitized by eGangotri

॥೩॥ ಕರ್ಣದಲಿ ಕುಂಡಲವು ಮಿರು ಮಿರುಗುತಾ । ಸ್ವರ್ಣ ಪುತ್ಥಳಿಯೆ ನೀ ಹೊಳೆ ಹೊಳೆಯುತಾ । ಪೂರ್ಣೇಂದು ವದನೆ ಶ್ರೀ ಭಾಗ್ಯಲಕ್ಷ್ಮೀ । ವರ್ಣಿಸಲು ಎನ್ನಳವೆ ದೇವಿ ನೀ ದಯ ಮಾಡಿ ॥೪॥ ಮುತ್ತಿನಾ ಮುಕುರಾ ಬುಲಾಕನಿಟ್ಟು । ಕಸ್ತುರಿಯ ತಿಲಕವನು ಫಣೆಯಲಿಟ್ಟು । ಮತ್ತೆ ಸೂರ್ಯ ಚಂದ್ರ ಬೈತಲೆಯ ಮುತ್ತು । ಉತ್ತುವಾಂಗವಿ ರಾಗುಟೆ ಗೊಂಡ್ಯನಿಟ್ಟು ॥೫॥ ನರ ಮಣೀ ಮಕುಟವನು ಶಿರದಲ್ಲಿ ಧರಿಸೀ । ಅರವಿಂದ ಕುಸುಮವನು ಕರದಲ್ಲಿ ಪಿಡಿದೂ । ಕರೆ ಕರೆದವರ ಮನೆಗೆ ನೀ ಪರುಷದಿಂದಾ । ಕರುಪೆ ಕಟಾಕ್ಷವನು ಬೀರುತಲಿ ನೀನೀಗ ॥೬॥ ಬಿಡಿ ಮಲ್ಲಿಗೆಯ ತಂದು ನಡಿ ಮುಡಿಯ ಹಾಸುವೆನು ಕಡಲ ಕನ್ನಿಯೆ ನಿನ್ನ ಅಡಿಗಳಿಗೆ ನಮಿಸುವೆನೂ । ಪದುಮೇಶ ವಿಠ್ಠಲನ ಕೂಡಿ ಬಾರಮ್ಮಾ । ಕಡು ಸಂತಸದಲಿ ನಾವಾರತಿಯ ಬೆಳಗುವೆವು ॥೭॥

10 ಶ್ರೀ ರಾಗ—ರೂಪಕತಾಳ

ಸಿರಿದೇವಿ ಬಾರಮ್ಮ ಮಂದಿರಕೆ ಈಗ । ವರಲಕ್ಷ್ಮಿ ಕರಿದೊಯ್ವೆ ಕರ ಪಿಡಿದು ಬೇಗ ॥೪॥ ವಂದಿಸುವೆ ನಾ ನಿನಗೆ ಇಂದಿರಾದೇವಿ ॥ ವಂದನೆಯ ಕೈಕೊಳ್ಳಿ ಚಂದಿರಾ ವದನೆ ಮಂದಮತಿಯಾದೆನಗೆ ಚಂದದಲಿ ತಿಳಿಸಮ್ಮ । ಇಂದಿರೇಶನ ಪಾದ ಪೊಂದ ಬೇಕಮ್ಮಾ ॥೧॥ ಶ್ವೇತಾಂಬರವ ಮಟ್ಟು ಕುತ್ತಾನಿ ಕಂಚುಕ ತೊಟ್ಟು ರತ್ನಾಭರಣ ವಿಟ್ಟು ಶಿಸ್ತಿನಿಂದಲಿ ದೇವೀ । ಮಸ್ತಕವಿ ಮಾಚಿಕದ ಕಿರೀಟವೂ । ಕಸ್ತುರಿ ತಿಲಕವು ಲಲಾಟದಲೊಪ್ಪುತಾ ॥೨॥ ಹರಡಿ ಕಂಕಣವಿಟ್ಟು ಕೊರಳ ಹಾರ ಧರಿಸಿ । ವರ ಜಡೆಯಲೊಪ್ಪುವ ಹೆರಳು ಬಂಗಾರ । ಮರುಗನುಲ್ಲಿಗೆ ಜಾಜೀ ಪರಿಮಳವ ಸೂಸಿ । ವರಲಕ್ಷ್ಮಿ ನೀ ಮನೆಗೆ ನಡೆದು ಬಾರಮ್ಮಾ ॥೩॥ ಕನಕ ಪೀಠದಿ ಕುಳಿತು ಕನಕಲತೆಯಂತೆ ಕನಕ ಧಾರೆಯ ಸುರಿಸಿ ವನಜಾಕ್ಷಿ [illegible]ಲಕುಮಿ । ಸನಕಾದಿವಂದ್ಯಳೇ ವಿನಯದಿಂ ಬೇಡುವೆನು । ಘನತರ ಭಕುತಿಯನೂ ಎನಗೆ ನೀಡಿ ॥೪॥ ಒಡೆಯ ವೆಂಕಟನಾ ಮಡದಿ ಮಹಲಕ್ಷ್ಮೀ । ಮುಡಿಯ ಬಾಗುವೆ ನಿನ್ನಾ ಅಡಿಗಳಲ್ಲೀ ಪದುಮೇಶ ವಿಠಲನಾ ಪದಯುಗವ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಂಬುದಕೇ । ಕಡೆ ಹಾಯಿಸಮ್ಮ, ಭವ ಕಡಲಿನಿಂದೀಗಾ ॥೫॥

11 ಹಿಂದೂಸ್ತಾನಿ—ರೂಪಕತಾಳ

ಕಾಯ್ ತಾಯೆ ಕೋಮಲಾಂಗಿಯೇ । ಶ್ರೀಯುತ ನೇತ್ರೇ ॥ಪ॥ ಅಜನ ಮಾತೆಯೇ । ಸುಜನ ಪ್ರೀತೆಯೇ ॥ ಪಾಲಿಸಮ್ಮ । ಭಜಿಪೆ ನಿನ್ನನೂ ತ್ರಿಜಗ ವಂದಿತೆ । ಗಜ ಗಮನೆಯೆ ವಂದಿಸುವೆನು ॥೧॥ ವಾಸುದೇವನ ವಕ್ಷಸ್ಥಳ ದಲ್ಲೀ ವಾಸವಾಗಿಸೇ । ಈ ಸಮಯದಲಿ ಬಂದು ನೀನು । ಸೂಸಿನಿಂದಲಿ ಸಲಹು ತಾಯೇ ॥೨॥ ಚಾರು ಹಸ್ತಗಳಿಂದ ನೀನು । ವರವ ನೀಡುತಾ ಸಾರ ಸಾಕ್ಷಿಯೆ ಸರಸದಿಂದಲಿ । ಮೂರ ಜನನಿ ತೋರು ರೂಪವಾ ॥೩॥ ಪದ್ಮ ಸುತೆಯೆ ಪದ್ಮವಾಸಿನಿ । ಪದ್ಮ ಸುಂದರೀ । ಪದ್ಮನಾಭನ ಕರವ ಪಿಡಿದಾ ಪ್ಮೇಶ ವಿಠಲನ ರಾಣಿಯೆ ಬಂದೂ ॥೪॥

12 ಸಾವೇರಿ—ಆದಿತಾಳ

ಗೋಪಕನ್ಯೆಯೆ ಕೇಳು ಗೋಕುಲಾಂಬುಧಿಯಲ್ಲಿ । ಗೋವಿಂದ ಶಿಶು ವಾಗಿ ಜನಿಸಿರುವನಂತೇ ।ಗೋಕುಲಾ ಚಂದ್ರನಿಗೇ ಗೋಪಿವೇಷಿಯು ತಾನು ಗೋಪಾಲಕೃಷ್ಣನೆಂದ್ದೆ ಸರಿಡುವಳಂತೇ ॥೧॥ ಕ್ಷೀರ ಸಾಗರ ಶಯನ ವಾರಿಜೋ ದ್ಭವ ವಂದ್ಯ । ನಾರಾಯಣನ ನಾವೂ ನೋಡಿ ಬರುವಾ । ಪರಮಾತ್ಮ ಪರಿ ಪೂರ್ಣ ಪರಮ ಪುರುಷನ ನೋಡಿ ಸರಸಿ ಜಾಕ್ಷಿಯೆ ನಾವು ಹರುಷ ಪಡುವಾ ॥೨॥ ಕುಂದನದ ತೊಟ್ಟಿಲೊಳೂ ಕಂದ ಕೃಷ್ಣನ ಇಟ್ಟೂ । ನಂದ ಗೋಪನ ರಾಣೀ ತೂಗುವಳಂತೇ। ಸುಂದರೀ ಮಣಿ ಕೇಳು ನಂದಗೋಪನ ಕಂದ । ಇಂದಿರಾಲೋಲ ವಿಠಲ ಅತಿ ಜೊಲುವನಂತೇ ॥೩॥

13 ತೋಡಿ—ಆದಿತಾಳ

ಕರೆವೆನೂ ಬಾರೆಲ್ಯೇ ಕರಿರಾಜ ವರದನೆ ॥ಪ॥ ಗರಡ ಗಮನ ವರಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷ । ಪರಂಜ್ಯೋತಿ ಹರೀ ನಿನ್ನಾ ॥ಅ.ಪ॥ ತರಳ ಧ್ರುವನ ಮೊರೆಯ ಕೇಳೀ । ಗರುಡ ನೇರಿ ತ್ವರದಿ ಬಂದೆ । ನಾರಾಯಣಾ ಶೌರೀ । ಕರುಣಾಸಿಧೀ ಎಂದು ನಿನ್ನಾ ॥೧॥ ನಾರಿ ಪಾಂಚಾಲಿಯ ಸೀರೆ ಸೆಳೆಯುತಿರೆ । ವಿೂರಿಭಕು ತಲಿ ದ್ವಾರಕಾನಾಥ ಎನಲು । ಮುರಳೀ ಲೋಲ ಅಕ್ಷಯವಿತ್ತ । ಅಪಾರ ಮಹಿಮ ಕೃಷ್ಣನೆಂದು ॥೨॥ ಉದಧಿ ಶಯನ ಪದುಮನಾಭ, ಆದಿ ಮೂಲ ನಿನ್ನನು । ಮೋದದಿಂದ ಭಜಿಸುವೆನು । ಪದುಮೇಶ ವಿಠ್ಠಲ ಬಾರೋ ॥೩।

14 ಮಧ್ಯಮಾವತಿ—ಆದಿತಾಳ

ಮುರಳೀಧರ ಕರುಣಾಕರ । ಬಾರೋ ರಾಜ ಗೋಪಾಲಾ ॥ಪ॥ ಅಂದಿಗೆ ಗೆಜ್ಜೆ ಮುಳಿ । ಚಂದವು ಫಲರೆಂದಡಿ ಇಡುತಲಿ ನೀ ॥ಅಪ॥ ಬಾಲಾರ ಕೂಡೀ ನೀಲಾವರ್ಣನೆ ಬಾರೋ । ಆವೂ ಕಾಯುವ ಸ್ವಾಮಿ ಶ್ರೀ ವಾಸುದೇವ ॥೨॥ ಬಾಲಾ ಮೋಹನ ರೂಪ ಜೆಲುವ ಕೃಷ್ಣಯ್ಯ । ಲೀಲಾ ವಿನೋದನೆ ಕೊಳಲಾನೂದುತಲೀ ॥೩॥ಪೊಂಗೊಳಲೂದುತ್ತ ರಂಗಾ ನೀ ಬಾರೋ । ಶೃಂಗಾರ ವಾಗಿಹ ಮಂಗಾಳ ಮೂರ್ತಿ ॥೪॥ ನಿಂದು ಭಕ್ತಿ ಯಲೀ ವಂದೀಸಿ ಬೇಡುವೆ ಇಂದಿರಾಲೋಲ ವಿಠ್ಠಲ ನೀನೆ ಕಾಯೋ ॥೫॥

15 ಆನಂದ ಭೈರವಿ—ಅಟ್ಟತಾಳ

ಎಂದೂ ಬರುವಿ ನೀನು ರಂಗಾ । ಎಂದೂ ಕಾಣುವೆ ನಾನು ॥ಪ॥ ಮುಂದರೋದ್ಧಾರ ಗೋವಿಂದಾ ಮುಕುಂದಾ । ಸುಂದರ ಶ್ರೀಕೃಷ್ಣಾ ॥ಅ.ಪ॥ ಗೆಜ್ಜೆಯ ಪಾದದಾ ನಾದವ ತೋರುತಾ । ಹೆಜ್ಜೆನಿಡುತ ಬಾರೋ ಮೂರ್ಜಗ ಮೊಡೆಯನೆ ।ಮಜ್ಜಿಯೊಳಗಿನ ಬೆಣ್ಣೆ ಕೊಡುವೆ ನಿನಗೇ ॥೧॥ ಸುಂದರ ನಡ ವಿಲೀ ಅಂದದ ಉಡಿಗೆಜ್ಜೆ ಚಂದದಿ ರುಣರೆನ್ನುತಾ ಮಂದಹಾಸದ ಮುಖ ದಿಂದಾ ನಗುತಲೀ ।ನಂದ ಗೋಪಿಯೆ ಕಂದಾ ॥೨॥ ಕರದಲಿ ಕಂಕಣ ಬೆರ ಳಲಿ ಉಂಗುರ ।ಕೊರಳಲಿ ಹಾಕಿದ ಹೂಮಾಲೆ ಸುರಗಿ ಹೂವಿನ ದಂಡೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿರದಲಿ ಮುಡಿದೂ । ನವಿಲು ಗರಿಯನಿಟ್ಟು ॥೩॥ ಕಡು ಕೋಪದಿಂದಲೀ ಗಡಿ
ಗೆಯನೊಡೆದೂ । ಒಡನೆ ಮೊಸರೂ ಈಡಾಡೀ ಸಡಗರ ದಿಂದಲೀ । ಕಡೆ
ಗೋಲ ಪಿಡಿದಾ ಉಡುಪಿಯ ಶ್ರೀ ಕೃಷ್ಣಾ ॥೪॥ ಬಾರೋ ದಯಾನಿಧೇ
ಬಾರೆನ್ನ ದೊರೆಯೇ । ಬಾರೋ ಭಕುತ ಚಿಂತಾಮಣಿಯೇ ಸಾರಸಾಕ್ಷ ಸರಸಿ
ಜನಾಭ ಮುರಳೀಧರ ಬಾರೋ ॥೫॥ ಗೋಪಿಯರನ್ನ ಬಾ ಗೋಪಾಲ ಕೃಷ್ಣ
ಬಾ । ಗೋಪಿಕಲೋಲನೆಬಾ ತಾಪದಲಿಹ ಎನ್ನಾ । ಪಾಪವ ಕಳೆಯಲು
ಶ್ರೀಪತಿ ಕೃಷ್ಣನೇ ಬಾ ॥೬ ಪದ್ಮ ದಳಾಕ್ಷನೇ ಪದ್ಮಿನಿ ಪ್ರಿಯನೇ । ಪದ್ಮಾ
ವತಿ ವಲ್ಲಭಾ ಪದ್ಮೇಶವಿಠಲಹು । ತ್ವದ್ಪಲೇ ನಿನ್ನ ಪದ್ಮಪಾದನತೋರೋ ॥೭॥

16 ಭೂಪಾಳಿ ಆದಿತಾಳ

ನಿನ್ನನು ನೋಡಲು ಬಂದೆನು ನಾನೂ । ನಿನ್ನಯ ದರುಶನ ಕೊಡು ನೀನೂ
॥ಪ॥ ಪನ್ನಗ ಶಯನಾ ಉಡುಪಿಯ ಚಿನ್ನಾ । ಕನ್ನೆ ಗೋಪಿಯರ ಮುದ್ದು
ಮೋಹನ್ನಾ ॥೨.ಪ॥ ಆಪ್ತ ಮಠದಾ ಯತಿಗಳ ಕರದಲೀ । ಇಷ್ಟದಿ ಪೂಜೆ
ಯ ಕೈಕೊಳುತಾ । ಶ್ರೇಷ್ಠ ಉಡುಪಿಯಲೀ ಕೃಷ್ಣನೆಂದೆನಿಸೀ । ದಿಟ್ಟತನದಿ
ಮೆರೆದ ರಾಜಗೋಪಾಲಾ ॥೧॥ ಅನುದಿನ ನಿನ್ನನು ನೆನೆಯುತಲಿರುವೆನು ।
ಸನಕಾದಿ ವಂದ್ಯಾ ಘನ ಮಹಿಮಾ । ಮನದಲಿ ನಿನ್ನಯಾ ಮೂರುತಿ
ತೋರೋ । ಚಿನುಮಯ ರೂಪಾ ಬಾಲಕೃಷ್ಣಯ್ಯಾ ॥೨॥ ಉದಯೆ ಕಾಲ
ದೊಳಿದ್ದು ಉದಧಿಶಯನ ನಿಮ್ಮಾ । ಪದುಮನಾಭನ ನೆನೆದು ಪ್ರತಿದಿನದೀ ।
ಮುದದಲ ಪಾಡುವಾ ಭಾಗ್ಯವ ಕರುಣಿಸೋ । ಯದುಗಿರೀಶ ಶ್ರೀ ಪದು
ಮೇಶ ವಿಠ್ಠಲ ॥೩॥

17 ವರಾಳಿ — ಆದಿತಾಳ

ಬಂದೆಯ ನಮ್ಮೂರಿಗೇ । ಕೃಷ್ಣಯ್ಯನೀ । ಬಾರಯ್ಯ ನಮ್ಮನೆಗೇ ॥ಪ॥
ಕಡಲನು ಧಾಟ್ಟೀ ಕಡಗೋಲ ಪಿಡಿದೂ । ಕಡುಬೇಗದಿಂದಲಿ ಬಂದೆಯಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡಲ ಶಯನ ನೀ ಉಡುಪಿಯಿಂದೋಡುತಾ । ಉಡುಪ ಮುಖ ಕೃಷ್ಣ ಬಂದೆಯಾ ॥೧॥ ಮಧ್ವಮತವನ್ನು ಉದ್ಧಾರಮಾಡಿದ । ಮಧ್ವರಾಯರ ಮಾನಸ ಮೂರ್ತಿ । ಮುದ್ದು ಕೃಷ್ಣನೆ ನೀನು । ವಿದ್ಯಮಾನ್ಯ ತೀರ್ಥರೊಂದಿಗೆ ॥೨॥ ಸುಂದರ ಮೂರ್ತಿ ಇಂದರಾಲೋಲ ವಿಠಲ ಬಂದು ನೀ ನಮ್ಮೂರೊಳು । ನಿಂದಿಹ ನಿನ್ನಡಿ ಗೊಂದಿಸಿ ಬೇಡುವೆ । ತಂದೆ ನೀ ಸಲಹೆನ್ನನು ॥೩॥

18 ಜಿಲಹರಿ — ಮಠ್ಯತಾಳ

ತೇರನೇರಿ ಬಂದಾ ಮುಕುಂದಾ ॥ಪ॥ ಮಾರ ಜನಕನು ಮೋಹನಾಂಗನು । ಸಾರುತ ಬಂದ ಸಿರಿಮೊಗದಿಂದ ॥ ಅ.ಪ ॥ ಮಧ್ವಸರಸಿನಲಿ ವಿಹರಿಸುತಾ । ಮಧ್ವಪೀಠದ ಯತಿಗಳ ಕರದಿ ಶೋಭಿಸುತ । ಮಧ್ವರಾಯರ ಮಾನಸ ಮೂರ್ತಿ । ಮುದ್ದು ಶ್ರೀ ಕೃಷ್ಣನು ಮುದವೀವೆನ್ನುತ ॥೧॥ ತುರಗ ಗಜಗಳು ಸಾಲಲಿ ನಿಂತಿರೆ । ಸುರ ವಾದ್ಯಗಳು ಮೊಳಗುತಿರೆ । ಹರಿ ಭಕುತರ ಸಂದಣಿಯು ನೆರೆದಿರೆ । ಮುರಳೀ ಲೋಲನು ದರುಶನ ವೀಯಲು ॥೨॥ ಬಾಲಯತಿವರ್ಯರು ಸಾಲಲಿ ಬರುತಿರೆ । ಸಾಲು ದೀವಟಿಗೆಯು ಬಾಲರು ಪಿಡಿದರೆ । ಕೋಲಲಿ ಅಂಬರ ಜ್ಯೋತಿ ಬೆಳಗುತಿರೆ । ಬಾಲ ಕೃಷ್ಣಯ್ಯನು ಬಲು ವೈಭವದಲಿ ॥೩॥ ಆಲಯದ್ವಾರದಿ ಬಾಲೆಯರೆಲ್ಲರು । ಬಾಲ ಕೃಷ್ಣಯ್ಯನ ನೋಡುತಲೀ । ನೀಲ ಮೇಘನೆ ನಮ್ಮ ಪಾಲಿಸೆಂದೆನುತಲಿ । ಬಾಲೆಯರೆಲ್ಲರು ಬಾಗಿ ನಮಿಸುತಿರೆ ॥೪॥ ನಡಗರದಿಂದಲಿ ಉಡುಪಿಯ ಕೃಷ್ಣನು । ನಡೆದು ಬಂದನು ತನ್ನ ಗುಡಿಯೊಳಗೆ । ನಡುವಿನ ಮಂಟಪ ಮಧ್ಯದಿ ಕುಳಿತು । ಬೇಡುವರಿಗೆ ವರ ನೀಡುವೆ ನೆನುತಿಹ ॥೫॥ ಎಂಥಾ ಸೊಬಗಿನ ಸಿರಿಯೋ ಶ್ರೀನಾಥನು ಏನು ಸೊಬಗಿನ ಮೊರೆಯೋ ॥ಪ॥ ಎಂಟು ಮತದಾಯತಿವರರೆಲ್ಲರು । ಮಂಟಪ ವಿದಿರಲಿ ಕುಳಿತಿರಲು । ಭಂಟರು ಗಂಧ ಪುಷ್ಪದ ಮಾಲೆಯನು । ಕಂಠಕ್ಕಾಕಿ ಆರತಿ ಬೆಳಗುವರು ॥೬॥ ಇಂಥ ಸೊಬಗನು ಕಾಣೆನೋ ಈ ಜಗದೊಳು ಇಂಥ ಸೊಬಗನು ಕಾಣೆನೋ ॥ಪ॥ ಕನಕನ

CC-O. In Public Domain. Digitized by eGangotri

ಕಂಡಿಲಿ ಕೃಷ್ಣನ ದರುಶನ । ಇಣಕಿ ಇಣಕಿ ತಾವ್ ಮಾಡುತಲೀ ಚಿನು
ಮಯ ಮೂರ್ತಿಯ ನೋಡಿ ನಲಿಯುತ ಮನದಣಿಯುವಂದದಿ ಪಾಡಿ
ಪ್ರೊಗಳುತಿಹರು ॥೭॥ ರಜತ ಪೀಠ ಪುರದಲೆ ರಾಜಗೋಪಾಲನು ತನ್ನ ಭಜ
ನೆಯ ಮಾಡುವ ಸುಜನರಿಗೇ । ನಿಜದಾನಂದವ ನೀವೆ ನೆನ್ನುತ । ರಾಜೀವಾಕ್ಷ
ಇಂದಿರಾಲೋಲ ವಿಠಲ ॥೮॥

19 ನಾದನಾಮಕ್ರಿಯಾ — ಆದಿತಾಳ

ಕಂಡೇ ಕಂಡೇ ಕಂಡೇ । ಉಡುಪಿ ಶ್ರೀ ಕೃಷ್ಣನ ಕಂಡೆ ಕಂಡೇ
ಕಂಡೇ ॥ಪ॥ ಬಾಲ ಲೀಲೆಗಳಾ ಮಾತೆಗೆ ತೋರಿದ । ಬಾಲ ಕೃಷ್ಣಯ್ಯನ
ಕಂಡೇ ॥ಅ.ಪ॥ ಅಂದಿಗೆ ಕಿರುಗೆಜ್ಜೇ ಇಟ್ಟವನಾ । ಕುಂದ್ಲ ದುಡಿದಾರ
ಕಟ್ಟಿಹನಾ । ದುಂಡು ಮಲ್ಲಿಗೆ ಮೊಗ್ಗೆ ದಂಡೆ ಮುಡಿದಿಹನಾ ॥೧॥ ಅಂಬೆಗಾ
ಲಿನಲ್ಲಿ ಬರುತಿಹನಾ । ಸಂಭ್ರಮದಲಿ ತಾ ತಿರುಗಿ ನೋಡುವನಾ । ನಂಬಿದ
ಭಕ್ತರಾ ಬೆಂಬಿಡದವನಾ । ಕುಂಭಿನೀ ಪತಿ ಶ್ರೀ ಕಡು ಮುದ್ದು ರಂಗನಾ ॥೨॥
ಬೆರಳಲಿ ಬೆಟ್ಟವಾನೆತ್ತಿದನಾ । ಉರದಲಿ ಸಿರಿದೇವಿ ಧರಿಸಿಹನಾ । ಶಿರದಲಿ
ಮುಕುಟವ ಇಟ್ಟಿಹನಾ । ಕರದಲಿ ಕೊರಳನು ಪಿಡಿದಿಹನಾ ॥೩॥ ಮುಖದಲಿ
ಮುದ್ದು ಸುರಿಸುವನಾ । ಅಕಳಂಕ ರೂಪಾ ಲಾವಣ್ಯೆನಾ । ಭಕುತರ ಭೀಷ್ಟ
ವಾ ಸಲಿಸುವನಾ ಮುಕುತೀಸ ನಮ್ಮಾ ಚೆಲುವ ಚೆನ್ನಿಗನಾ ॥೪॥ ಸುಂದರ
ಮೂರುತೀ ಮೋಹನನಾ । ಮಂದ ಗಮನೆ ಶ್ರೀ ಲಕುಮಿ ರಮಣನಾ ।
ಮಂದರೋದ್ಧಾರ ಗೋವಿಂದಾ ಮುಕುಂದನಾ । ಇಂದಿರಾ ಲೋಲ ವಿಠ
ಲನ ಪಾದವ ॥೫॥

20 ಕಾಡಿ — ಆದಿತಾಳ

ಬೃಂದಾವನದಲಿ ನೀರೇ । ಗೋಪಿ ಕಂದನ ನೋಡಲು ಸಾರೋ ॥ಪ॥ ಚಂ
ದದಿ ಪ್ರೊಗುವ ಬಾರೇ । ಅಂದದ ಆಟದ ಕೋಲನು ತಾರೇ ॥ಅ.ಪ॥ ಕೊಳ
ಲಿನ ಧನಿಯು ಕೊಳಲೂದುತಾ । ನಳಿನ ಪಾದವ ನೆನೆಯಲೇ । ನಳಿನಾಕ್ಷ

Sri Vidyabharati Foundation, Bangalore & Sringeri

CC-O. In Public Domain. Digitized by eGangotri

ಗೋಪಾಲ ಕೃಷ್ಣನನೂ । ನಲಿನಲಿಯುತ ನಾವ್ ಕೂಡುವಾ ಸಖಿ ॥೧॥ ಮುರಲೀ ನಾದದ ನೋಡಲೂ । ಬಲು ತ್ವರಿತದಲೀ ನಾ ಬಂದೆನೇ । ಸಿರಿವರ ಕೃಷ್ಣನ ಆಟದ ಸೊಬಗನು । ಸರಸಿಜಾಕ್ಷಿ ನೀ ನೋಡು ಬಾ ಸಖಿ ॥೨॥ ಗೋವಳರಾಯನ ಕರೆಯುನು ಕೇಳೀ । ಧಾವಿಸಿ ಬಂದೆನು ಈಗಲೇ । ಸಾವಧಾನ ವೇತಕೆ ತರುಣೀ । ದೇವಕಿ ಕುದನ ನೋಡಲು ಪ್ರೋಗುವ ॥೩॥ ನೋಡೆಲೆ ಬೃಂದಾವನ ಸೊಬಗಾ । ಕೂಡಿದ ಗಿಳಿ ನವಿಲ್ಹಿಂಡುಗಳ । ಗಾಡಿಕಾರ ಶ್ರೀ ರಂಗಗೇ । ಈಡುಂಟೀ ಈ ನಾಡೊಳಗೆ ಸಖಿ ॥೪॥ ಸುಮಗಳು ಲತೆಯಲ್ಲರಳಿಹುದು । ಘಮಘಮಿಸುವುದೀ ವನನೆಲ್ಲಾ । ಯಮುನೆಯು ತುಂಬೀ ತುಳುಕುತಿವೇ । ಶಾಮಲ ವರ್ಣನ ಮಹಿಮೆ ಇದೂ ಸಖಿ ॥೫॥ ಚಿಗರಿಯ ಮರಿಗಳ ನೋಡೆ ಸಖೀ । ನಾಗಾಲೋಟದಿ ಬರುತಲಿವೇ । ಖಗಗಳು ಮೃಗಗಳು ಕೊಡುತಿವೇ । ಸೊಗಸಿದಕಿಂತಲೂ ಇಹುದೇ ಸಖಿ ॥೬॥ ತರುವಿಲಿ ಫಲಗಳು ತುಂಬಿಹುದು । ಹರುಷ ಮನ ತುಳುಕಾಡುವುದು । ತುರುಗಳು ಕರುಗಳು ನೋಡೆ ಸಖೀ । ಮುರಳೀ ಕೃಷ್ಣ ನಾ ಬಳಿಯಲ್ಲೀ ॥೭॥ ಕೆಂಡಿನ ಪೀತಾಂಬರ ಉಟ್ಟು । ಬಲು ಸೊಂಪು ನೋಟವ ಬೀರುತಿಹ । ಇಂಪಾದ ಗಾನವನು ನುಡಿಸುತಿಹಾ । ಸಂಪಂಗಿ ತರುವಿನ ತಡಿಯಲ್ಲಿ ॥೮॥ ಅಂಗನೆಮಣಿ ನೀ ಕೇಳೆ । ಗೋಪಾಂಗನೆರೆಲ್ಲರ ಕೂಡುತಲೀ । ರಂಗನ ಸನಿಹದಿ ಕುಣಿಯುತಲೀ । ತಿಂಗಳ ತಿಳ ಬೆಳದಿಂಗಳಲೀ ॥೯॥ ಕಡೆಗೋಲು ಚಿನ್ನನ ನೋಡುತಾ । ಪದುನೇಶ ವಿಠಲನ ಭಜನೆಯು ಪಾಡುತ ! ಕಡುಸಂತಸದಿ ಆಡುವಾ ಸಖಿ ॥೧೦॥

21 ಬೇಹಾಗ್ — ರೂಪಕತಾಳ

ನುಡಿಸು ಕೃಷ್ಣ ಮುರಲಿಯ ಸುದತಿಯರಿಗೆ ಮಾಧವಾ । ಮುದದಿ ಕಳುಹು ಕರಿಯಾ ॥ಪ॥ ಚಂದಿರನೂ ಗಗನದಲ್ಲಿ । ಬಂದಿರುವಾ ವೇಳೆಯಲ್ಲಿ । ನಂದನಂದನ ನಿನ್ನೊಡಗೂಡಿ । ಸುಂದರಿಯರು ಕುಣಿವೆವು ॥೧॥ ಸುಂದರ ಕೊಳಲಾ ಗಾನಮೊಳೂ । ಇಂದಿನ ದಿನ ಬೃಂದಾವನಮೊಳೂ । ಇಂದಿರಾಲೋಲ ವಿಠಲ ನಿನ್ನಯ ಕೂಡೀ ಆನಂದದಿಂದ ನಲಿವೆವು ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

22 ಪುನ್ನಗವರಾಳಿ ಆದಿತಾಳ

ಊದುಕೊಳಲಾ ಕೃಷ್ಣರಾಯ । ಮಧುರಗಾನವು ಕೇಳುವಂತೆ ॥ಪ॥ ಗಾನಕೇಳೀ ಮಾಸಿನಿಯರೂ । ಮನವನಿಟ್ಟೂ ನಿನ್ನಲೀಗಾ । ಮನೆಯ ತೊರೆದು ಬರುವರೀಗಾ ॥೧॥ ಪತಿಯು ಬಿಟ್ಟೂ ಸುತರಬಿಟ್ಟೂ । ಸತತ ನಿನ್ನನು ಧ್ಯಾನಗೈವ । ಸತಿ ಮಣಿಯರಾ ಕರೆಯೋ ಬೇಗಾ ॥೨॥ ಅಂದಿಗೆಯ ಗೆಜ್ಜೆ ನಾದ । ಚುದವಿಂಪ ಕೇಳುತಿವೆ । ಬಂದಳೇನೋ ರಾಧೆ ತಾನು । ಇಂದಿರಾ ಲೋಲ ವಿತಲ ಬೇಗ ॥೩॥

23 ರಾಗಮಾಲಿಕೆ ಭೈರವಿರಾಗ

ಯಮುನೆಯಾ ತೀರದಲೀ ಕಮಲಾಕ್ಷ ಹರಿತಾನೂ । ರಮೆ ಎಂಬ ಕೊಳಲನ್ನು ಧ್ವನಿ ಗೈಸಿದಾ ॥ಪ॥ ಕಮಲ ಮುಖಿಯರು ತಾವು ಅಮರ ಗಾನಕೆ ಸೋತು । ರಮೆ ಯರಸನಾ ನೆನೆದೂ । ಮನೆ ಬಿಟ್ಟರೂ ॥೨. ಪ॥ ಸರಿರಾತ್ರಿ ಯಾಗಿರಲು ತರವೇನೋ ನಿನಗೇ । ಮುರಲಿಯಾ ನೂದುವುದು ಹರಿಯೇ । ಸರಸಿಜಾಕ್ಷಿಯರಾ ಸರಸದಾ ನುಡಿಕೇಳಿ । ಭರದಿಂದ ಮುರಲಿ ಯನು ಪೂರೈಸಿದಾ ॥೧॥ ನಿಮ್ಮ ಮನನನು ತಿಳಿಯೆ ನಿಮ್ಮ ಭಕುತಿಯ ನೋಡೆ । ಸುಮ್ಮನೇ ಕರೆದಿಹೆನು ಸುದತಿಯರೆ ಕೇಳೀ । ಸನ್ಮತಾವಾಗದಿರೇ ನಿಮ್ಮಮನೆಗೆ ನೀವು । ಗನ್ಮನೇ ಪೋಗುವುದು ಎಂದೆನಲು ಹರಿಯು ॥೨॥ ನಿನ್ನಲ್ಲಿ ಬಂದಿರಲು ಇನ್ನು ಪೋಗುವುದೇಕೋ । ಮನ್ನಾರು ಕೃಷ್ಣಯ್ಯ ನೀನೇ ಪೇಳೋ । ಚೆನ್ನವಾಯೀತೀಗಾ ನಿನ್ನ ಈ ನುಡಿಯೂ । ಹೊನ್ನಿನಾ ಕೊಳ ಲಾ ನುಡಿಸೆಂದರು ॥೩॥ ಆದಿದಾ ನುಡಿ ಕೇಳಿ ಮೂಡಿದಾ ಹರುಷದಲೀ । ಕೂಡಿ ಅವರಲಿ ನಿಂತೂ ಕೊಳಲೂದಿದಾ । ಜೋಡಿ ಜೋಡಾಗೀ ಹಾಡಿ ಪಾಡುತಲೀ । ಕಡುಮೋಹನಾಂಗಿಯರು ಕುಣಿದರಂದೂ ॥೪॥ ಹಾಲ ಬೆಳದಿಂಗಳಲೀ ಬಾಲಕೃಷ್ಣನ ಕೂಡೀ । ಬಾಲಿಕಾ ಮಣಿಯರೂ ನಲಿ ನಲಿ ಯುತಾ । ನೀಲವರ್ಣನೆ ನಿನ್ನಾ ಒಲೈಸುವಾ ಭಾಗ್ಯ । ಶ್ರೀ ಲೋಲ ನಮ ಗಿತ್ತು ಕಾಯೋ ಎಂದೂ ॥೫॥ ರಂಗುರಂಗಿನ ಉಡುಗೆ ಭಂಗಾರದಾ ಭರಣ । ಶೃಂಗಾರವಾಗಿಹರು ಎಲ್ಲರೂವರರೂ ಜನಕೋಟಿ ಮಂಗಳಾ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಯಕವು । ಸಂಗ ಸುಖದೊಳು ಬೆರೆತು ಮೈಯ ಮರೆತೂ ॥೬॥ ಧಿಮಿ ಧಿಮಿ ಧಿಮಿಕೆಂದೂ ಕಾಮಜನಕನ ಕೂಡಿ । ಅಮರ ನೃತ್ಯವನಾಡೆ ಸಂತೋಷದೀ । ರಮಣಿಯರ ಸಹಿತಾಗೀ ಅಮರರೆಲ್ಲರು ಕೂಡೀ ಸುಮ ಮಳೆಯ ಸುರಿಸಿದರು ಶ್ರೀಕೃಷ್ಣಗೆ ॥೭॥ ಎಂತು ವರ್ಣಿಪೆ ನಾನು ಈ ಪುಣ್ಯವತಿಯರನು ಸಂತಸವಾಗಿಹುದು ಎನ್ನ ಮನಕೇ । ಶ್ರೀಕಾಂತ ಇಂದಿರಾಲೋಲ ವಿಠ್ಠಲನೇ ಸಂತತವು ನಿನ್ನ ಅನಂತ ಲೀಲೆಯ ತೋರೋ ॥೮॥

24 ನವರೋಜು — ರೂಪಕತಾಳ

ಪ್ರೇಗುವೆ ನಾ ನೀಗಲೇ । ಶ್ರೀ ಕೃಷ್ಣನಲ್ಲಿ । ಪ್ರೇಗುನೆನಾನೀಗಲೇ ಪ್ರೇಗೀನಾನು ಬಾಗಿನ ವಿಸುವೆ ಅವಗೇ ॥ಪ॥ ಭಾಗವತಪ್ರೀಯ । ಯೋಗೀಗಳರಸಾ ನಾಗವೇಣಿಯರನು । ಈಗಕರೆಯುತಿಹ ॥ಅ.ಪ॥ ಗೋಕುಲ ಜೆಂದಿರನು । ಶ್ರೀಕೃಷ್ಣನು । ಲೋಕೈಕ ಸುಂದರನು । ಶ್ರೀ ಕೊಳಲೂದಿ । ತಾಕಿಯುತಲಿಹನೂ ॥ ಲೋಕಾನಾಯಕ ಜಗವೇಕವಂದ್ಯಾನಾದ । ಶ್ರೀಕಾಂತ ನಿರುವಲ್ಲಿ । ಏಕ ಭಕುತಿ ಇಂದ ॥೧॥ ಮಾಧವಕರೆಯುತಿಹ । ಮುದದಿಂದ । ಊಮತ್ತ ಮುರಳಿಯನು । ಮಧುರಗಾನ ಮೋದವಾಗಿಹುವೆನಗೇ ವೇದಾವುರುಷನಾದ । ಯಾದವನರಾಯನ । ಪಾದ ಸೇವೆಯನಾನು । ಆದರದಲಿಮಾಡೆ ॥೨॥ ಮುರಳೀಗಾನವು ಕೇಳುತಾ । ತರುಲತೆಇಂದ । ಪರಿಮಳ ಕುಸುಮಗಳು । ತ್ವರಿತದಿಂದ ಸರಿದೂಪ್ರೇಗುತಲಿಹುದು । ತರುಗಳುಕರುಗಳು ಭರದಿ ಪ್ರೇಗುತಲಿವೆ । ಹರಿ ತನ್ನ ಕೊಳಲೂದಿ ಮರುಳು ಮಾಡಿದನೀಗ ॥೩॥ ತಿಂಗಾಳ ಬೆಳಕಿನಲೀ । ಶೃಂಗಾರವಾದೆ । ಮಂಗಳರೂಪವನು । ಕುಂಗಾಳಿಂದ ರಂಗಾನನೋಡುವೆನು ।ಬೃಂಗಾಕುಂತಲೆಯರು । ರಂಗಾನ ಬಳಿಯಲ್ಲಿ ।ಹೊಂಗುವಾನಂದದಿ । ಭಂಗಿ ಕುಣಿವುದಕೀಗ ॥೪॥ ನಂದಾಗೋಕುಲದಲ್ಲೀ । ಇಂದಿರೆರಮಣ । ಕಂದಾನಾಗಿರುತಿಹನು । ಸುಂದರಿಯರ । ಹೊಂದಿ ಕುಣಿದಾಡುವನು ಬೃಂದಾವನಾದಲಿನಿಂದೂ ಕೊಳಲೂದುತ್ತ । ಇಂದೀರಲೋಲ ವಿಠಲ ಸುಂದರುಶನವೀವ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

25 ಪಂತುವರಾಳಿ — ತ್ರಿಪುಟತಾಳ

ಕೇಳಮ್ಮಾ ಗೋಪೀ । ನಿನ್ನ ಬಾಲಕೃಷ್ಣಯ್ಯನ । ಲೀಲೆಗಳನ್ನೂ ॥ಪ॥ ಕಳ್ಳತನದಲೀ । ಮೆಲ್ಲಗೆ ಬರುವ । ಮೆಲ್ಲುವ ಬೆಣ್ಣೆಯ ಜೆಲ್ವ ಗೋಪಾಲ ಕೃಷ್ಣ ॥೧॥ ಕರುಗಳಬಿಡುವಾ । ನೊರೆಹಾಲ ಕುಡಿವಾ । ಸರಸಿಜಾಕ್ಷಿಯರ ಕೂಡೆ । ಸರಸವಾಡುವನು ॥೨॥ ಪಾಲು ಮೊಸರು ಬಾಂಡ । ಕೆಂಪಲಲಿ ಬಡಿವ ಕೋಲಲಿಬಡಿವ । ಪಾಲು ಸುರಿಯೆ ಧಾರೆಗೆ ಬಾಯನೊಡ್ಡುವ ॥೩॥ ರುಗಿ ರುಗಿಸುವ ಪೀತಾಂಬರ ಉಟ್ಟಿಹ । ಅಗರು ಚಂದನ ಶ್ರೀಗಂಧ ಹಚ್ಚಿಹನೇ ॥೪॥ ಬೃಂದಾವನದಿವ್ರಜ । ಸುಂದರಿಯರ ಕೂಡಿ । ಧಿಂ ಧೀವಿಧಿವಿ ಕೆಂದು ನಾಟ್ಯವಾಡುವನೇ ॥೫॥ ಶೃಂಗಾರವಾಗಿಹ । ಮಂಗಾಳ ಮಹಿಮನು । ಪೊಂಗೂಳಲೂದುವ ರಂಗಾನ ಚರಿತೆ ॥೬॥ ಭೋಗಸೆ ಕಣ್ಣಲಿ ಎನ್ನ ಕರಿಯುತಲಿರುವ । ಮಿಗೆಹರುಷದಿ ತಾನಗು ನಗುತಿರುವಾ ॥೭॥ ಮದನ ಮೋಹನ ಕೃಷ್ಣ ಪದುಮೇಶ ವಿಠಲನ । ಪದುಮ ಪಾದವ ನೋಡೆ । ಮುದದಿ ಬಂದೆನೆನಾನು ॥೮॥

26 ಕಮಾಚ್ — ರೂಪಕತಾಳ

ಏಕಯ್ಯ ಶ್ರೀಕೃಷ್ಣ ತುಂಟನಾದೆಯೂ । ಗೋಕುಲ ಪತಿ ನೀ ಲೋಕನಾಥಾ ॥ಪ॥ ಸಣ್ಣವನೀನಲ್ಲವೇ । ಬೆಣ್ಣೆಯ ಕದಿವರೇನೊ । ಕಣ್ಣು ಸನ್ನೆಯಮಾಡಿ ಹೆಣ್ಣು ಮೋಹಿಪರೇನೋ ॥೧॥ ಬಾಲ ಕೃಷ್ಣಯ್ಯ ನೀನು । ಬಾಲೀರ ಮನೆಯ ಪೊಕ್ಕು । ಪಾಲು ಮೊಸರನು ಕುಡಿದು । ಜಾಲಾ ಮಾಡುವರೇನೋ ॥೨॥ ಕಂದಾಕೃಷ್ಣಯ್ಯ ಕೇಳೋ । ನಿಂದಿರು ಮನೆಯಲ್ಲೀ । ಇಂದಿರ ಲೋಲ ವಿಠಲ । ಮಂದೀಸಿ ಬೇಡುವೆ ॥೩॥

27 ಸೌರಾಷ್ಟ್ರ ರೂಪಕತಾಳ

ಏನು ಪೇಳಲೆ ಗೋಪೀ । ನಾನಿನಿ ಯರನುಡಿ ಕೇಳದಿರಮ್ಮಾ ॥ಪ॥ ಒಂದು ಅರಿಯದೆಲೆ ನಾನು । ನಿನ್ನ । ಮುಂದಿರದೊಳಗಾಡುತಿರೆ । ತಂಡ ತಂಡದಿ ಬಂದು । ಕೂಡಿ ಬೆರೆಸಿಹರು । ಮಂದರಧರನಮ್ಮ । ಮಂದಿರ

Sri Vidyabharathi Book Corner, Bangalore

CC-O. In Public Domain. Digitized by eGangotri

ಕೊಯ್ದರು ॥೧॥ ಹಾಲು ಕೊಡುವರಿನಗೇ । ಮೆಲು ಬೆಣ್ಣೆಯನೆನ್ನುವರು । ಜೆಲ್ವ ಕೃಷ್ಣನೆ ಎಂದು । ಗಲ್ಲವಪಿಡಿದು । ಸಲ್ಲಾಪವಾಡುತ । ನಿಲ್ಲು ನಿಲ್ಲೆಂಬರು ॥೨॥ ಮುದ್ದುಮುಖವ ತೋರೋ । ನಿನಗೇ । ತಿದ್ದುವೆ ತಿಲುಕವನ್ನೂ । ಸಿದ್ದ ಮುನಿಗಳ । ಹೆದ್ದೈವವೆ ನಿನ್ನ । ಮುದ್ದಿಡುವೆನು ಇಲ್ಲಿ । ಇದ್ದು ಬಿಡೆಂಬರು ॥೩॥ ತರಳರ ಒಡಗೂಡೀ । ನಾನು ತುರುವು ಕಾಯುತ ಲಿರಲೂ । ಸರ ಸರ ಬರುವರು । ಸರೋಜ ಮುಖಿಯರು । ತರಳ ಕೃಷ್ಣನೆ ನಿನ್ನ ಮುರಳಿನುಡಿಸೆಂಬರು ॥೪॥ ಮುರಳಿಯ ಊದದಿರೇ । ನೇತ್ರಾದಿ । ವಾರಿ ಧಾರೆಯಸುರಿಸೀ । ಪರಿ ಪರಿ ಬೇಡುತಾ । ಕರುಣಾಳು ಎಂಬುವ । ಬಿರುದನು ತೆಗೆ ಎಂದು । ಕರೆ ಕರೆ ಗೊಳಿಪರು ॥೫॥ ಮುರಳಿಯ ನಾ ನುಡಿಸೇ । ಹರುಷದಿ ಕುಣಿಯುವರು । ಗಿರಿಗಳು ಲತೆಗಳು । ತುರುಗಳು ಕರುಗಳು । ಹರಿವಯ ಮುನಸಹ ಬೆರಗಾಗಿಹುದನು ॥೬॥ ಬಂದರು ಭಕುತಿಯಲೀ । ನಿಂದರು ಬಳಿಯಲ್ಲೀ ಕುಂದುಗಳೆಣಿಸದೆ । ಸಿಂಧುಶಯನ ಕಾಯೋ । ಇಂದಿರಲೋಲ ವಿತಲ । ವಂದಿಪೆ ನೆಂಬರು ॥೭॥

28 (ವರಾಳಿ) — ಆದಿತಾಳ

ಗಿರಿಧರ ಗೋಪಾಲ । ಮುರಹರ ಮಾನವ ಸರಿ ಯಾರೋ ನಿನಗೇ । ಬಾರೆನ್ನ ಬಳಿಗೇ ॥೪॥ ಶಿಶುವು ನೀನಾಗಿ । ಅಸುರೆ ಪೂತನಿಯ । ವಿಷದ ಮೊಲೆಯನ್ನೂ ಉಣಲೇಕೋ । ವಿಷದಮೊಲೆಯನುಂಡ । ವಸುದೇವ ಸುತ ನೀನು । ಶಿಶುವಿನಂದಲೀ ಕಾಣುವಿಯೋ ॥೧॥ ಒರಳಿಗೆ ಕಟ್ಟಲು । ಉರುಳಿಸಿಕೊಂಡು ನೀ । ಸರ ಸರ ಪೋಪದು ಸರಿಯೇನೊ । ಸರ ಸರ ಪೋಗುತ್ತ । ಮರವನ್ನೆ ಉರುಳಿಸಿ । ಸುರರನ್ನೆ ಮಾಡಿದ ಸರಿಏನೋ ॥೨॥ ಗೊಲ್ಲರ ಮನೆ ಸೊಕ್ಕು । ಮೆಲ್ಲುತ್ತ ಬೆಣ್ಣೆಯ । ಜಲ್ವೆಗೋಪಿಯರಾ ಜೊತೆಯಲ್ಲೀ । ಜೆಲ್ವೆ ಗೋಪಿಯರಲ್ಲಿ ಚೆಲ್ಲಾಟವಾಡುತ್ತ । ಸಲ್ಲಾಪ ಮಾಡೋದು ಸರಿಏನೋ ॥೩॥ ಸುರಸತಿ ಗರ್ವವು । ಮುರಿಯಬೇಕೆನು ತಲೆಗಿರಿಗೆ ಔತಣಕೊಡಿಸಿದೆಯೋ । ಗಿರಿಗೆ ಔತಣ ಕೊಡಿಸೇ । ಭರದಿಂದ ಮಳೆಗರೆಯೆ । ಬೆರಳಲ್ಲಿ ಗಿರಿ ಎತ್ತಿ ಕಾಯ್ದೆಯೊ ॥೪॥ ಕಡಹಾದ ಮರನೇರಿ । ಮಡುವನ್ನೆ ಧುಮುಕಿ । ಹೆಡೆಯಮೇಲಾಡುತ್ತ । ಹೆದರನೆ ಕೊಳಲಿದ । ಉಡುಪ ಮುಖ ನಿನ್ನ ಸರಿ ಯಾರೋ

Sri Vidyaranya Bharathi Book Centre, Sringeri

CC-O. In Public Domain. Digitized by eGangotri

॥೫॥ ನಾರಿಯರಿಟ್ಟಿಂಥ । ಸೀರೆಗಳನು ಕದ್ದು । ಏರಿದೆ ಏಕೇ ಮರವನ್ನು । ಏರಿದ ನಿನ್ನ । ಮುರಾರಿ ಕೃಷ್ಣ ಎನಲು । ಸೀರೆ ಗಳ ಕೊಟ್ಟಿ ಶಿರಿಕಾಂತ ॥೬॥ ಬೃಂದಾವನದಿವ್ರಜ । ಸುಂದರಿಯರ ಕೂಡಿ ಚಂದ ಚಂದಲಿ । ಕುಣಿವ ದೇನೋ । ನಂದಾಕಂದನೆ ನಿನ್ನ । ಅಂದಾದಿ ನೋಡುವ । ಸುಂದಾರಿಯರಿಗೆ ಸರಿ ಯಾರೋ ॥೭॥ ಎಲ್ಲೆಲ್ಲಿ ಪೋಗದಿರು । ನಿಲ್ಲು ನೀಮನೆಯಲ್ಲಿ । ಪುಲ್ಲ ನಾಭ ಎನ್ನ ಸೊಲ್ಲು ಕೇಳೋ ಪುಲ್ಲಮರ್ದನಸಿರಿ ವಲ್ಲಭ ನಿನ್ನ । ಗಲ್ಲಪಿಡಿದು ನಾ ಬೇಡುವೆನೋ ॥೮॥ ನಂದ ಕಂದನೆನಿನ್ನ । ಒಂದೊಂದು ಮಹಿಮೆಗಳು । ಚೆಂದಾಗಿ ಅತಿಹ ಮುನಿವರರು । ಸಂದೇಹವಿಲ್ಲವು । ಇಂದಿರಾಲೋಲ ವಿಠಲ ಎಂದು ಪೇಳುತ್ತಲಿಹರಯ್ಯಾ ॥೯॥

29 ನವರೋಜು — ಆದಿತಾಳ

ಕೃಷ್ಣಯ್ಯ ನೀ ಕರೆದ ಕಾರಣವೇನು । ಲಕ್ಷ್ಮೀರಮಣ ಪೇಳೋ ॥ಪ॥ ಪಕ್ಷಿವಾಹನದೇವ । ರಕ್ಷಿಸುನಮ್ಮ ॥ಅ.ಪ॥ ಮುರಲೀನಾದವು ಕೇಳಿ ಪರವಶ ವಾಗಲು । ಹರಿ ನೀನೇ ಗತಿ ಎಂದು । ತ್ವರಿತದಿ ಬಂದೆನು ॥೧॥ ನಿನ್ನಾ ಬಿಟ್ಟಿರಲು । ಎನ್ನಾ ಮನ ಒಲ್ಲದು । ಪನ್ನಾಗಶಯನಾ । ಚೆನ್ನಾ ಕೇಶವನೆ ॥೨॥ ಭಕುತರಸಂಗವಿತ್ತು । ಭಕುತಿ ಭಾಗ್ಯವಾನಿತ್ತು । ಮುಕುತಿ ಮಾರ್ಗವ ತೋರೋ । ಲಕುಮಿ ರಮಣನೇ ॥೩॥ ಇಂದು ಎನ್ನಯ ಭವ । ಬಂಧನ ಬಿಡಿಸಿ ತಂದೆ ನೀ ಕಾಯಬೇಕೋ । ಇಂದಿರಾಲೋಲ ವಿಠಲ ॥೪॥

30 ಕಾಂಬೋಧಿರಾಗ — ಆದಿತಾಳ

ಎಲ್ಲಿರುವೆ । ಎಲ್ಲಿರುವೆ । ಎಲ್ಲಿರುವೆ ಬಾಬಾ ಮಲ್ಲಮರ್ದನ ಸಿರಿ ವಲ್ಲಭ ನೆನೇ ॥೪॥ ಗೋಪಿತೊಡೆಯಲಿ ಇಹೆಯೋ । ಗೋಪವೃಂದದಲಿಹೆಯೋ । ಗೋಸಾಲಕೃಷ್ಣ ನೀನೆಲ್ಲಿರುವೆ ಬಾಬಾ । ಗೋವಿಂದ ನೀನೀಗ । ಗೋವು ಕಾಯುತ ಲಿಹೆಯೊ । ಗೋವರ್ಧನಗಿರೀ । ಎತ್ತಿನಿಂದಿಹೆಯೊ ॥೧॥ ಪಾಲು ಗಡಲೊಳು ಮಲಗೀ । ಪರಮಮಂಗಳ ಕರವೀ । ಪಾದಸೇವೆಯನು । ಕೈ ಕೊಳುತಲಿಹೆಯೋ । ಪುರಂದರವಿಠಲೆ । ಪಾದಕೆರಗುವೆನೈಯ್ಯ ।

Sri Vyasarajamatha Book Centre, Sringeri

CC-O. In Public Domain. Digitized by eGangotri

ಪಾಲಿಸೆನ್ನನು ದೇವ । ಪರಮ ಪುರುಷ ॥೨॥ ತರಳ ಧ್ರುವ ನಿರುವಲ್ಲೀ । ಭರದಿ ಪೋಗುತ ಲಿಹೆಯೋ । ಕರಿರಾಜ ನಿನ್ನನು ಕರೆಯುತಿಹನೋ ಪರಮ ಭಕ್ತಿಲಿ ನಿನ್ನ । ಹರಿಕೃಷ್ಣ ಎಂತೆಂಬ । ಹರಡೆ ದ್ರೌಪದಿಯಸೀ ನೆನೆಯುತಿಹೆಯೋ । ॥೩॥ ನಿನ್ನ ಮೂರ್ತಿದ್ಯಾನ । ನಿನ್ನವರ ಒಡನಾಟ । ನಿನ್ನ ದಾಸರಸಂಗವನ್ನು ಕರುಣಿಸೋ । ಪನ್ನಗಾದ್ರಿನಿವಾಸ । ನಿನ್ನ ನಂಬಿದೆನಾನು । ಎನ್ನಕರೆ ನಿನಗೆ । ಕೇಳಲೊಲ್ಲದೇ ದೇವಾ ॥೪॥ ಮಂದಭಾಗ್ಯಳು ನಾನು । ಇಂದಿರಾಪತಿ ನೀನು । ನಿಂದ್ಯಳೂ ನಾನು । ವಂದ್ಯನೂ ನೀನು । ಬಾಧನಾಬೊಳು ಸಿಲುಕಿ । ಬೆಂದು ಬಳಲಿದೆನಯ್ಯ । ತಂದೆ ಇಂದಿರಲೋಲ । ವಿತಲ ಕಾಯೋ ॥೫॥

31 ಹಿಂದೋಳರಾಗ — ರೂಪಕತಾಳ

ದೂರತೀರದಲಿಂದ । ಪೂರಿಬಹೆವಾರುತದೀ । ಕೇಳುತಿವೆ ಮುರಳೀ ಗಾನಾ ಓ ಚನ್ನಿಗನಾ ॥ ಮುದ್ದು ನೋಹನ್ನಾ ॥೧॥ ಮಾಧವನ ಮುರಳೀ । ವಾದನಕೆ ಮನಸೋತು । ರಾಧೆ ಮಾಧವನ ನೆನೆದೂ ॥ ಮನೆಯನೂ ತೊರೆದೂ ಬಂದಾಳೂ ನಡೆದೂ ॥೨॥ ಮುರಳಿಗಾನಕೆ ಮನಸು । ಸೊರೆಗೊಂಡಿತೂ ದೇವ । ನಾರಿತು ನಿನ್ನ ಕಡೆಗೇ ॥ ಮುರಳಿಯಾ ಕರೆಗೇ ಬರುವೆ ನಾ ಬಳಿಗೇ ॥೩॥ ಸುಂದರಾಂಗನಿನೆಂದು । ಬಿಂದಿಗೇ ಕ್ಷೀರವನು ಕೊಂಡೊಯ್ವೆನೆನು ತಲಾಗಾ ॥ ಹೊರಟು ತಾನಾಗಾ । ಹರುಷ ದಲಿ ಬೇಗಾ ॥೪॥ ವನದ ಕುಸುಮವಕಂಡು । ವನಜನಾಭನಿಗೆಂದು । ವನಜಾಕ್ಷಿ ಕೊಯ್ದಳಾಗಾ । ಹರಿಯ ನೆನೆದಾಗಾ । ಭಕ್ತಿಯಲಿ ಬೇಗಾ ॥೫॥ ಪರಮ ಪಾವನೆಳಾದ । ಹರಿಪಯ ಮುನಿಯ ಕಂಡು । ಹರಿಪಾದಕರ್ಪಿತಾವೆಂದೂ । ರಾಧೆತಾನಿಂದೂ ॥ ಕರ ಮುಗಿದಳಂದೂ ॥೬॥ ಮಂದಹಾಸದಿ ರಾಧೆ । ಬಂದಳೂ ವನಕಾಗ ಇಂದಿರಾ ಲೋಲ ವಿತಲನಕಂಡೂ । ಭಕ್ತಿಯಿಂಬಾಗೀ ನಮಿಸಿದಳಂದೂ ॥೭॥

32 ಕಲ್ಯಾಣಿ ರಾಗ — ಆದಿತಾಳ

ಕಂಡಿರೇನಮ್ಮಾ । ಕೃಷ್ಣಯ್ಯನಾ । ಮಂದಹಾಸದ ಅರವಿಂದ ದಳಾ ಕ್ಷನ ॥ಪ॥ ಸುಂದರಾಮಣಿ ನಿನ್ನ । ನಂದಿರಕೀಗ । ನಂದಕುಮಾರನು ।೦

Sri Vidyabharathi Book Centre, Shingeri

CC-O. In Public Domain. Digitized by eGangotri

ದಿಹನೇನೇ । ಎಂಪೆಂದು ಎನ್ನ ಮನೆ ಇಂದಗಲದ ಶಿಶು । ಇಂದೆಲ್ಲಿ ಪೋದನೋ ಕಂದಾಕೃಷ್ಣಯ್ಯ ॥೧॥ ದಟ್ಟಡಿ ಇಡುತಾಲಿ । ಪುಟ್ಟ ಕೃಷ್ಣಯ್ಯನು । ಇಟ್ಟ ಬೆಣ್ಣೆಯನೆಲ್ಲ । ಕೊಟ್ಟೂ ಬಿಡೆಂದ । ಪುಟ್ಟಾಕರದಿನಾ । ನಿಷ್ಟೂ ಬೆಣ್ಣೆಯ ನಿಡೆ । ದಿಟ್ಟತನದಲಿಸೆದು । ಥಟ್ಟನೆ ಓಡಿದ ॥೨॥ ಕಂದಾನ ಕಾಣದೆ । ನೊಂ ದಿಹೆನಮ್ಮ । ಸುಂದರಾಂಗನೀ । ಕಂಡೇಯ ಪೇಳೇ । ಇಂದೀರಲೋಲವಿಠಲ । ಬಂದಾರೆ ಈಗಲೇ । ಚೆಂದಾದಿಂದಲಿ ಬಿಗಿದಿಪ್ಪೀ ಮುದ್ದಿಸಿಕೊಂಬೇ ॥೩॥

33 ಶಂಕರಾಭರಣ ರಾಗ — ಆದಿತಾಳ

ಹೂವಿನ ವನದಲ್ಲೀ । ಹುಡುಕಿದರೂ । ಶ್ರೀ ಹರಿ ಹರಿ ಎಂದೂ ॥ ಹರ ವೆಯರೆಲ್ಲರೂ । ಶ್ರೀ ಹರಿ ಹರಿ ಎಂದೂ ॥ಪ॥ ಹರಪೆಯರೊಡಗೂಡೀ । ಪರಿತಾ । ಮುರಲಿಯನೂದುತಲೀ ॥ ಕುಣಿದು ಕುಣಿಸುತಾ । ತಣಿಸಿನಲಿಸು ತಾ । ಇರುತ ಇರುತ ಹರಿ ಕಣ್ಮರೆಯಾಗಲು ॥೧॥ ಬಳ್ಳಿಗಳನೆ ತಳ್ಳೀ ಚಲ್ವ ಯರೂ । ಅಲ್ಲಲ್ಲಿ ಅರಸುತಲೀ । ಚಲ್ವ ಕೃಷ್ಣನ ಕಾಣದೆ । ಕಾಣದೆ ಬಳಲು ತಾ । ಪುಲ್ಲಲೋಚನ ಹರಿ । ಎಲ್ಲಿಹನೆನುತಾ ॥೨॥ ವನ ವನ ಹುಡುಕುತಲೀ ನಡೆದರೂ । ವನಜಾಕ್ಷಿಯರೆಲ್ಲಾ । ಚಿನುಮಯ ರೂಪನಾ । ಮನದಲಿ ನೆನೆ ಯುತ । ತನು ಮನವರ್ಪಿಸಿ । ಮನದಲಿದ್ಯಾನಿಸಿ ॥೩॥ ತರುಲ ತೆಗಿಡಗಳಿರಾ ಕಂಡಿರಾ ಪರಿಮಳ ಸುಮಗಳಿರಾ । ಕಂಡಿರ ಕೃಷ್ಣನ । ಕಂಡಿರ ರಂಗನಾ । ಕಂಡಿರಾ ಪೇಳಿನೀವ್ ಪೇಳಿರೆನುತಾ ॥೪॥ ತಿಂಗಳ ಬೆಳಕಿನಲೀ । ಹುಡುಕಿದ ರೂ । ಮಂಗಳ ಮೂರುತಿಯಾ । ರಂಗನ ಕಾಣದೆ । ಅಂಗನೆ ಮಣಿಯರು । ಕಂಗಳಿಂದಲಿ ಜಲಧಾರೆಯ ಸುರಿಸುತ ॥೫॥ ಕೃಷ್ಣನ ಹುಡಕುತಲೀ । ನಡೆದ ರೂ । ಕೃಷ್ಣವೇಣಿಯರೆಲ್ಲಾ । ಕೃಷ್ಣ ಕೃಷ್ಣ ಎಂದು । ಕೃಷ್ಣ ಬಾರೋ ಎಂದು ಕೃಷ್ಣನ ಕೂಗುತ । ಕರೆಯುತ ಹೊರಟರು ॥೬॥ ಹೂವಿನ ಹೊಲದ ಲ್ಲೀ । ಕಂಡನು । ಅವು ಕಾಯುವ ಕೃಷ್ಣ ॥ ಭಾವೆರ ಭಿಕುತಿಗೇ । ಧಾವಿಸಿ ಬಂದನು ಭಾವೇರಿಗಾನಂದ । ಈವೆನೆನುತಾ ॥೭॥ ದೇವತೆಗಳು ಕೂಡಿ । ನೆರೆದರು ದೇವ ದುಂದುಭಿನುಡಿಸೇಭಾ ವೆರಮಧ್ಯದಿ । ಹಾವಭಾವದಲೀ ।ಶ್ರೀ ವಾಸುದೇವನು । ನಾಟ್ಯವಾಡಿದ ॥೮॥ ಚಂದಿರ ವದನೆಯರು । ಗೋವಿಂದ ನಾ । ಕಂಡು ಆನಂದದಲೀ । ಇಂದಿರಲೋಲ ವಿಠ್ಠಲ ಸಲಹೆಂದು । ಬಂದೆರ ಗಾದರು । ಮುಕುಂದನ ಚರಣದಿ ॥೯॥

Sri Vidyabharathi Book Centre, Sringeri

CC-O. In Public Domain. Digitized by eGangotri

34 ಸೌರಾಷ್ಟ್ರ — ಆದಿತಾಳ

ಎಂತಿರುವನೇ ಗೋಪೀ । ಕಾಂತೆ ನೀ ಪೇಳಮ್ಮಾ । ಚಿಂತೆ ಏತಕೆ ಮನದಿ । ನಿಂತು ನೀ ಪೇಳೇ ॥ಪ॥ ಪೊಳೆವ ಪೀತಾಂಬರದ । ವಲಿವ ಏಕಾವಳಿಯ । ಜೆಲುವ ಶ್ರೀಕೃಷ್ಣ । ಕುಂದನೇನೇ ಕೊಳಲನೂದುತ ತಾನು । ಲಲನೆಯರ ಮನ ಬೆಳೆವ । ನಳಿನ ನಾಭನು ನಿನ್ನ । ಬಾಲನೇನೇ ॥೧॥ ಅಕ್ಕ ಗೋಪಮ್ಮ ಕೇಳೇ । ರಕ್ಕಸಾಂತಕ ಕೃಷ್ಣ ಚಿಕ್ಕನುಗುವೇನೆ । ರುಕ್ಮಿಣೀ ರಮಣ । ಮಕ್ಕಳಾ ಮಾಣಿಕ್ಯ । ನಿನ್ನಕ್ಕರದ ಮಗನೇನೇ ॥೨॥ ಇಂದುಮುಖಿಯರಕೂಡಿ । ಇಂದಿರಾದೇವಿ ರಮಣ । ಬೃಂದಾವನದೊಳಗೆ ಆಡುತಿಹನೇ । ಸಿಂಧು ಶಯನಾ ನಮ್ಮ । ಇಂದಿರಾಲೋಲ ವಿತಲನ । ಚಂದದಲಿ ನೀ ಪೋಗೀ ಕರೆದುತಾರೇ ॥೩॥

35 ರೇಗುಪ್ತಿ — ಝಂಪೆತಾಳ

ಬೃಂದಾವನಕೆ ಎನ್ನ । ಕರೆದೊಯ್ಯೋ ಕೃಷ್ಣಾ । ಅಂದಚೆಂದವನೋಡೀ ಆ । ನಂದಿಸುವೆನೋ ॥ಪ॥ ಮುರಳೀನಾದವಕೇಳೀ । ಪರಿಮಳದ ಕುಸುಮಗಳು । ಭರದಿಂದ ಬಂದು ಸಿರಿ । ಚರಣಕೆರಗೀ ಪರನಾತ್ಮ । ಪರಿಪೂರ್ಣ ಪರಮ ಪುರುಷನೆ ನಿನ್ನ । ಚರಣ ಕಮಲದಿ ಸುಖಿಪಾ । ಸುಮಗಳನು ಕಾಂಬಾಸೆ ॥೧॥ ಗಿಳಿ ನವಿಲು ಕೋಗಿಲೆಯು । ಚಲಿಸವೆಲೆತಾವ್ ಕುಳಿತು । ಕೊಳಲನಾಲಿಸುತಿಹುದು । ಕಾಂಬುವಾಸೆಯು ಎನಗೆ ನಳಿನ ನಾಭನೆ ನಿನ್ನ । ಕೊಳಲಿನಾಕರೆ ಕೇಳೀ । ಒಲವಿಂದ ಬರುವಾ ಲಲನೆಯರಕಾಂಬಾಸೇ ॥೨॥ ಕಲ್ಲು ಕರಗೀ । ನೀರಾಗುವುದು ಕಾಂಬಾಸೇ । ಜೆಲ್ವೆ ಯಮುನೆಯು ತುಂಬೀ ಬರುವುದನು ಕಾಂಬಾಸೇ । ಜೆಲ್ವ ಕೃಷ್ಣನೆ ನಿನ್ನಾ । ಜಲ್ವಿಕೆಯ ಕಾಣುತಾ । ಪುಲ್ಲು ಮೇವನು ತೊರೆವಾ । ತುರುವಿಂಡು ಕಾಂಬಾಸೆ ॥೩॥ ಜರದ ಪೀತಾಂಬರದಾ । ಕೊರಳ ಕೌಸ್ತುಭಮಣಿಯ । ಬೆರಳಿಗುಂಗುರವಿಟ್ಟ । ಹರಿ ನಿನ್ನ ಕಾಂಬಾಸೇ ॥ ಸಿರಿ ಮೊಗದಿಧರಿಸಿದ್ದಾ । ಪೆರೆವಕಸ್ತುರಿತಿಲಕಾ । ಕುರುಳು ಕೇಶವ ಜೆಲುವಾ । ಕಾಂಬುವಾಸೆಯು ಎನಗೆ ॥೪॥ ಭಾವೆಯರು ಭಕುತಿಯಲೀ ಬರುವುದನು ಕಾಂಬಾಸೇ । ನೇವ ನಿನ್ನಯ ಕಣ್ಣ । ಕುಡಿನೋಟ

Sri Vidyabharathi Book Centre, Shigeri

CC-O. In Public Domain. Digitized by eGangotri

ಕಾಂಬಾಸೇ ಹಾನಭಾವದಿ ಕುಣಿದು ನಲಿವುದನು ಕಾಂಬಾಸೇ ಬಾವ ಭಕು
ತಿಲಿ ನಿನಗೆ ನಮಿಸುವಾಸೆಯು ಎನಗೇ ॥೫॥ ಕೊಳಲಿನಾ ಹೊಳೆಯಲ್ಲೀ
ಮುಳುಗಿ ಏಳುವಾಸೆ ಕೊಳಲಿನವ್ಯತವನುಂಡು ನಲಿಯವಾಸೆ ಮೆಲುಕುಹಾ
ಕುತ ಅದನು ಮತ್ತೆನಿಸೆವಾಸೆ । ಮಲಿನ ಆತ್ಮವ ತೊಳೆದು ಶುದ್ಧಿಮಾಡೆಂ
ಬಾಸೆ ॥೬॥ ಭಕ್ತಿಯಲಿ ನಿನ್ನ ಪೂಜೆ । ಭಕ್ತಿಯಲಿ ನಿನ್ನ ಧ್ಯಾನ । ಭಕ್ತಿಯಲಿ
ನಿನ್ನ ಮೂರ್ತಿ ಕಾಣುವಾಸೆ । ಮುಕ್ತರೊಡೆಯ ಇಂದಿರಲೋಲ ವಿಠಲ ನಿನ್ನ
ಭಕ್ತರೊಳುಬೆರಸೆಂದು ಬೇಡುವಾಸೆಯು ಎನಗೇ ॥೭॥

36 ಶುದ್ಧಸಾವೇರಿರಾಗ — ಆದಿತಾಳ

ಬಂದೆಯ ನೀನೇ । ಪಾಂಡುರಂಗಯ್ಯಾ । ಅಂದಿಗೇಪಾದದಿಂ । ಚಂ
ದದಿ ಕುಣಿ ಕುಣಿದುನೀ ॥ಪ॥ ಕುಲ ಸ್ವಾಮಿ ನೀನು ಚಿಲುವ ಪಂಡು ರಾಮ ।
ಒಲುಮೆ ಇಂದೀಗ । ಕಲ್ಯಾಣ ನಗರಿಗೇ ॥೧॥ ದರುಶನ ವೀಯಲು ಪ್ಪರುಷ
ವ ಪಡಿಸಲು । ಸರಸಿಜಾಕ್ಷಿ ಶ್ರೀ । ರಕುಮಾಯಿಸಹಿತಾ ॥೨॥ ಕೂಗಿದರೆ
ನಿನ್ನಾ । ಶ್ರೀ ಗುರುಗೋವಿಂದರು । ರಾಗನನಾಲಿಸುತ । ಭಾಗನತಪ್ರೀಯ
॥೩॥ ನಾದಬ್ರಹ್ಮನೆ ನೀನು । ನಾದವ ಕೇಳುತ । ಮೋದ ಕೊಡುವೆ ।
ಗುರು ಗೋವಿಂದ ದಾಸರಿಗೆಂದೂ ॥೪॥ ಚಂದ್ರಭಾಗದ ಸ್ನಾನ । ಪಾಂಡು
ರಂಗನ ನೋಡಿ । ಎಂದು ಆನಂದ ಪಡುವೆ ಮೆಂದು ।ಯೋಚಿಸುತಿರೇ ॥೫॥
ವಿಠ್ಠಲ ವಿಠ್ಠಲ ಎಂದು ತಟ್ಟುತ ತಾಳವ । ನರ್ತಿಸುತಿರುವಾ । ಭಕ್ತರಿಗೊ
ಲಿದು ॥೬॥ ಸೃಷ್ಟಿಗೊಡೆಯಮ । ತ್ತಿಷ್ಟು ಸ್ತುತಿಸಿ । ಸಂತುಷ್ಟಿ ಪಡುವಂತಿ
ಷ್ಟುಕರುಣಿಸೋ ॥೭॥ ಬಂದು ಇಲ್ಲಿಂದ ಗುರು । ಗೋವಿಂದದಾಸರ ಕೂಡಿ ।
ಮುಂಬೆ ಮಹಿಸೂರಿಗೇ । ಚೆಂದದಿ ಪಯಣ ಬೆಳಸಿ ॥೮॥ ಇಂದು ನಿನ್ನಯ
ಪಾದ । ದ್ವಂದದಿ ಭಕುತಿ ಕೊಟ್ಟು । ಬಂಧನ ಬಿಡಿಸಯ್ಯಾ ಇಂದಿರಾಲೋಲ
ವಿಠ್ಠಲ ॥೯॥

37 ಬೇಹಾಗ್ ರಾಗ — ರೂಪಕತಾಳ

ಬನ್ನಿ ಬನ್ನಿ ಬನ್ನಿರಮ್ಮ ಬೇಗ ಬನ್ನಿರೇ ನೀವು । ಬೇಗಬನ್ನಿರೆ
ಚಿನ್ನಕೃಷ್ಣ ದೇವ ನನ್ನು । ನೋಡಬನ್ನಿರೇ ನೀವು ನೋಡಬನ್ನಿರೇ ॥ಪ॥
ಉಡುಪಿಗೇ ಹೋಗಬೇಕಾದುದಿಲ್ಲವೇ ಉಡುಪಿಯಾ। ಕೃಷ್ಣ ತಾನೆ ।

CC-O. In Public Domain. Digitized by eGangotri

ಬಂದಿರುವನೇ ತಾನೇ ಬಂದಿರುವನೇ ॥೨॥ ಕಡಲು ಧಾಟಿ । ಹಡಗಿನಲ್ಲಿ । ಬಂದ ಕಾಣಿರೇ ಸಡಗರದಿ । ಉಡುಪಿಯಲ್ಲಿನಿಂದ ಕಾಣಿರೆ । ಉಡುಪ ಮುಖದಕೃಷ್ಣನಾಡಂದ ನೋಡಿರೇ । ಬಡವರೀಗೆ ಭಾಗ್ಯದಾ ನಿಧಿಯು ಕಾಣಿರೇ ಇವನು ನಿಧಿಯು ಕಾಣಿರೆ ॥೧॥ ವಿದ್ಯಮಾನ್ಯತೀರ್ಥರನರು। ಕರುಣ ದಿಂದಲೀ ಮುದ್ದುಕೃಷ್ಣನನ್ನು ಇಲ್ಲಿ। ಕರೆದುತಂದರು ವಿದ್ಯಮಾನ್ಯತೀರ್ಥರೀಗೆ ವಂದನೆ ಮಾಡಿರೇ । ಮುದ್ದು ಕೃಷ್ಣನನ್ನು ನೀವು । ನೋಡ ಬನ್ನಿರೇ ।ನೀವು ನೋಡಬನ್ನಿರೇ ॥೨॥ ಸರಸಿಜಾಕ್ಷಿ । ಸರಸಿನಲ್ಲಿ ಸ್ನಾನಮಾಡಿರೇ ನೆರೆವ ತಿಲಕ ವನ್ನು ನೀವು । ತಿದ್ದಿಹಚ್ಚಿರೇ ಹರುಷದಿಂದ ಮುದಿಯನುಟ್ಟು ಬೇಗ ಬನ್ನಿರೇ।ಸಿರಿಯ ರಮಣನಿಗೇ ಇದು ಸೇವೆ ಎನ್ನಿರೇ ಇದು ಸೇವೆ ಎನ್ನಿರೇ ॥೩॥ ಒಡವೆ ವಸ್ತ್ರ ಆಭರಣ । ಧರಿಸಿ ಬನ್ನಿರೇ । ಮುಡಿಗೆ ಮಲ್ಲಿಗೆಯ ದಂಡೆ । ಮಾಲೆಯ ಮುಡಿಯಿರೆ ಕಡಲ ಶಯನ ಕೃಷ್ಣನನ್ನು । ಮನದಿ ನೆನೆಯಿರೇ । ಕಡೆಗೋಲು ಚಿನ್ನ ಇವನ । ಚೆಂದ ನೋಡಿರೇ ॥೪॥ ಪಾದ ತೊಳೆಯಿ ಶುದ್ಧ ಜಲವು ನೀವು ತನ್ನಿರೇ ಮಾಧವನಾಗೆ ಉಡಲು ಮಡಿಯ । ನೀವು ತನ್ನಿರೇ । ಮಧುಸೂಧನನಾಗೆ ಶ್ರೀಗಂಧ ತನ್ನಿರೇ । ಯದುಕುಲೇಶ ಕೃಷ್ಣನಿಗೇ ತಿಲಕ ತನ್ನಿರೇ ನೀವು । ತಿಲಕ ತನ್ನಿರೇ ॥೫॥ ಪೂಜ ಸಾಧನವು ಎಲ್ಲ । ನೀವು ತನ್ನಿರೇ ಜಾಜಿ ಮಲ್ಲಿಗೆ । ಮಾಲೆಯ ನೀವು ತನ್ನಿರೇ। ಮೂಜಗತ್ಪತೀ ಪಾದ । ವನ್ನು ನಂಬಿರೇ ।ರಾಜಗೋಪಾಲನ । ಪೂಜೇಗೆ ಬನ್ನಿರೇ । ಪೂಜೆಗೆ ಬನ್ನಿರೇ ॥೬॥ ನಿಂಸಲಾದ ಚಕ್ಕುಲೀ । ಕಜ್ಜಾಯ ತನ್ನಿರೇ । ವಾಸುದೇವನಿಗೇ ಬೆಣ್ಣೆ ಮರೆಯಬೇಡಿರೇ । ಶ್ರೀಕೃಷ್ಣನೀಗೆ । ಮೊಸರು ಹಾಲು ತನ್ನಿರೇ ಸಾಸಿರಾನಾ ಮದಾ । ಕೂಸುಕಾಣಿರೇ ಇವನು ಕೂಸು ಕಾಣಿರೇ ॥೭॥ ಹಬ್ಬವಿಂದು ಊರಿಗೆಂದು । ತಿಳಿದು ಬನ್ನಿರೆ ಒಬ್ಬರಾದರೂ ಹಿಂದೆ । ಉಳಿಯ ಬೇಡಿರೇ । ಕೊಬ್ಬರೀಮಿಠಾಯಿಯನ್ನು । ನೀವು ತನ್ನಿರೇ । ಉಬ್ಬಿದಾ ಹರುಷದಿಂದ ಹೊರಟುಬನ್ನಿರೇ ನೀವು ಹೊರಟು ಬನ್ನಿರೇ ॥೮॥ ಒಂದು ಗೂಡಿ ನಾವು ಎಲ್ಲ ಹೋಗುವ ಬನ್ನಿರೇ । ಕಂದ ಕೃಷ್ಣನಾ ಪೂಜೆ । ನೋಡುವ ಬನ್ನಿರೇ ।ನಂದ ಗೋಪಿಕಂದನೀಗೆ । ವಂದನೆಮಾಡಿರೇ । ಎಂದೆಂದಿಗೂ ಭಕ್ತಿ ಬಿಡಲು ಬೇಡಿರೇ ಭಕ್ತಿ ಬಿಡಲು ಬೇಡಿರೇ ॥೯॥ ಭಕ್ತವತ್ಸಲಾ ನಮ್ಮ । ಕೃಷ್ಣದೇವನು । ಭಕ್ತಿ ಇಂದ ಭಜಿಸಿ

CC-O. In Public Domain. Digitized by eGangotri

ದರೇ । ಹರುಷ ಪಡುವನೇ।ಮುಕ್ತಿಕೊಡೆಯ । ಇಂದಿರಾಲೋಲ ವಿಠಲನ । ಭಕ್ತಿಇಂದ ಭಜಿಸಿ ನಾವು ಮುಕ್ತಿ ಪಡೆಯುವಾ ನಾವು ಮುಕ್ತಿ ಪಡೆಯುವಾ ॥೧೦॥

38 ಸ್ವಾಗತಗೀತೆ

ಸಾಗಿಬನ್ನಿರಮ್ಮಾ । ಬೇಗಸಾಗಿಬನ್ನಿರಮ್ಮಾ । ನಾಗವೇಣಿನಿಮ್ಮಾ । ಬಾಗಿ ಕರೆವೆವಮ್ಮಾ । ಬಾಗಿಕರೆವೆನಮ್ಮಾ ॥೧॥ ಪರುಷನೆರಡು ಆಯ್ತು । ಹರಿಯ ಒಲುಮೆ ಯಾಯ್ತು । ಶಿರಿಯ ಕರುಣವಾಯ್ತು । ಪರುಷನೆ ಮಗೆ ಆಯ್ತು ಹರುಷನೆ ಮಗೆ ಆಯ್ತು ॥೨॥ ವಾರಕೊಂಡು ಶುಕ್ರ । ಘಾರಬರುತಲಿಹುದು ಸಿರಿದೇವಿ ಪೂಚೆ ಇಂದೂ ನಾರೆರೆಲ್ಲಬನ್ನೀ ನಾರೆರೆಲ್ಲಬನ್ನಿ ॥೩॥ ಮನೆ ಮನೆಯಲ್ಲಿ ನೀವೂ । ವನಜನಾಭ ಹರಿಯಾ। ಮನದಿ ಭಕುತಿ ಇಂದಾ ನೆನೆಯುತಿ ತಿರುವಿರಮ್ಮಾ ನೆನೆಯುತಿರುವಿರಮ್ಮಾ ॥೪॥ ಬೆಳಗಾಗಲೆದ್ದು ನೀವೂ । ನಳಿನ ಮುಖಿಯರೆಲ್ಲಾ । ಕೊಳಲುರಂಗನನ್ನೂ । ನಲಿದು ಪಾಡುವೀರೀ ನಲಿದು ಪಾಡುವೀರೀ ॥೫॥ ಸಂಪ್ರದಾಯ ಪದವಾ ಇಂಪುಗನದಿಂದಾ । ಕಂಪಸೂಸು ವಂತೇ ಇಂಪುತರುವಿರಮ್ಮಾ ಇಂಪುತರುವಿರಮ್ಮಾ ॥೬॥ ಮುತ್ತಿನಂಥ ಮಹಿಳೇ ರಿತ್ತಬನ್ನಿರಮ್ಮಾ । ಅರ್ಥಿಇಂದಲೆಮ್ಮಾ । ಈವತ್ತೆ ಕೂಡಿರಮ್ಮಾ । ಈವತ್ತೆ ಕೂಡಿರಮ್ಮಾ ॥೭॥ ಮತ್ತೆ ಕೇಳಿರಮ್ಮಾ । ಭಕ್ತಿಇಂದ ಹಾಡೀ । ಹಕ್ಕು ಮನೆಗೆ ನೀವೂ ಭಕ್ತಿ ಬಿತ್ತಿರಮ್ಮಾ । ಭಕ್ತಿ ಬಿತ್ತಿರಮ್ಮಾ ॥೮॥ ಇಂದು ಮುಖಿಯರೆಲ್ಲಾ । ಮುಂದೆ ಬನ್ನಿರಮ್ಮಾ ಇಂದಿರೆಯ ಕೃಪೆಯಾ । ಪೊಂದಿ ಸುಖಿಸಿರಮ್ಮಾ । ಪೊಂದಿಸುಖಿಸಿರಮ್ಮಾ ॥೯॥ ಮನಸು ಮಾಡಿದಾರೇ । ಇನಿತುದೂರವಿಲ್ಲ । ವನಜನೇತ್ರಿಲಕ್ಷ್ಮೀ । ಸನಿಹದಲ್ಲೆ ಇಹಳೂ ಸನಿಹದಲ್ಲೆ ಇಹಳು ॥೧೦॥ ಮಂಗಳೆಯರು ನಾವು । ಮಂಗಳಾಂಗಿಗೀಗಾ । ಮಂಗಳವನು ಪಾಡಿ । ಮಂಗಳವನು ಪಡೆವಾ । ಮಂಗಳವನು ಪಡೆವಾ ॥೧೧॥ ಹರಿಯ ದಯದಿ ನಿಮಗೇ । ಪರುಷವಾಗಲಮ್ಮಾ । ಹರಿಯರಾಣೆ ನಿಮಗೇ । ಪರವ ನೀಯಲಮ್ಮಾ । ಪರವನೀಯಲಮ್ಮಾ ॥೧೨॥ ಮುದನ ನಯ್ಯನನ್ನೂ ಮುದದಿ ಪಾಡಿದಾರೇ । ಮುದವ ಕೊಡುವ ನಮಗೆ । ಪದುಮೇಶ ವಿಠ್ಠಲಾನು । ಪದುಮೇಶ ವಿಠ್ಠಲನು ॥೧೩॥

CC-O. Vidyabharathi Book Centre, Sringeri

CC-O. In Public Domain. Digitized by eGangotri

39 ಸಾವೇರಿ ರಾಗ — ತ್ರಿಪುಟತಾಳ

ಶ್ರೀ ರಂಗನಾಥಾ ॥ ಶ್ರೀರಂಗಶಾಯೀ । ಶ್ರೀರಂಗಪುರದಲ್ಲಿ । ನೆಲಸಿ
ದೆಯೋ ॥ ಶ್ರೀರಂಗಪುರದಲ್ಲಿ ನೆಲಸೀ ನೀನೀಗ । ಶ್ರೀರಂಗಧಾಮ ನೆಂದೆನಿಸಿ
ದೆಯೋ ॥೧॥ ಶ್ರೀ ರಂಗನಾಥಾ ॥ ಚನ್ನೆ ಕಾವೇರಿಯು । ನಿನ್ನಯ ಗುಡಿ ಸುತ್ತಿ
ಕಣ್ಣಿಗಾನಂದವಕೊಡುತಿಹಳೋ ಕಣ್ಣಿಗಾನಂದವಕೊಡುತಲಿ ಕಾವೇರಿ। ನಿನ್ನ
ಪಾದವನೂ ಸೇವಿಪಳೊ ॥೨॥ ಶ್ರೀ ರಂಗನಾಥಾ ॥ ಭೋರೆಂಬೊ ಕಾವೇರಿ ।
ಘೋರ ಧ್ವನಿಯ ಕೇಳಿ ನಾರಿ ಆರ್ಭಟವಿದೇನೆನಲೂ । ನಾರಿ ಆರ್ಭಟವಿದೇ
ನೆಂಬ ನುಡಿಕೇಳೀ । ನೀರೆ ತಗ್ಗಿದಳೂ ಆಕ್ಷಣದೀ ॥೩॥ ಶ್ರೀರಂಗನಾಥಾ॥ನಿನ್ನ
ಗುಡಿಯೊಳಗೆಇನ್ನು ಸಪ್ಪಳವಿಲ್ಲ । ನಿನ್ನ ಗುಡಿಯಾಚೇ ಪೇಳಲಳವಲ್ಲ । ನಿನ್ನ
ಪೇಳಲಳವಲ್ಲವೋ ಚೆನ್ನೆ ಕಾವೇರಿ । ಭಕುತಿ ಎಂತೋ ॥೪॥ ಶ್ರೀರಂಗನಾಥಾ॥
ಆದೀಮೂಲನೆನೀನು । ಆಶೇಷನ ಮೇಲೇ ನೋದಬಿಂದಲಿ। ಮಲಗಿದೆಯೋ
ಮೋದದಿಂದಲಿನೀ । ಮಲಗಿರೇ ಶ್ರೀದೇವಿ । ಪಾದವನೊತ್ತುತ ।
ಸೇವಿಪಳೋ ॥೫॥ ಶ್ರೀರಂಗನಾಥಾ ॥ ರಂಗನಾಥನೆ ನಿನ್ನ ಮಂಗಾಳ
ರೂಪವು । ಕಂಗಳಿಗಾನಂದ ವಾಗಿಹುದೋ । ಕಂಗಳಿಗಾನಂದ ವಾಗಿಹುದೊ
ದೇವ । ರಂಗ ಇಂದಿರಾಲೋಲ ವಿತಲನೇ ॥೬॥ ಶ್ರೀರಂಗನಾಥಾ॥

40 ಪೀಲು ರಾಗ — ಆದಿತಾಳ

ಭಕುತ ಕೊಡೊ । ಭಕುತಿ ಕೊಡೊ ಭಕುತವತ್ಸಲ।ಮುಕುತರೊಡೆಯ ।
ಲಕುಮಿರಮಣ । ರುಕುಮಿಣೀ ಪತೀ ॥೧॥ ಬರುವ ಆಸೆ ಎನಗೆ ಇಹುದು
ಕೇಳೊನೀನು । ಸಿರಿ ಕೃಷ್ಣ ನಿನ್ನ ನೋಡ ಬೇಕೆನುವೆ ನಾನು । ಕರಿಕರಿಯು
ಬಹಳವಿಹುದು । ಕೇಳೊ ನೀನು । ಬರುವೆನೆಂದು ಇನಿತು ದೂರ ತಿಳಿಯೋ
ನೀನು ॥೨॥ ಶೃಂಗಾರವಾದ ರೂಪ ಮೂಡಿಬಂದಾ । ರಂಗವಲ್ಲಿಯಾ
ಕೃಷ್ಣ ರೂಪ ಚೆಂದಾ । ಕಂಗಳಿಂದ ನೋಡಿದವರಿಗಾನಂದಾ । ಕಂಗಳಿಗೆ
ಕಾಣುಬಾರೋ ಗೋಪಿ ಕಂದಾ ॥೩॥ ಮಡದಿ ರುಕ್ಮಿಣೀಗೆ ಮನ ಮೋಹ
ಗೊಂಡ । ಕಡೆಗೆ ಗೊಲ್ಲ ಪಿಡಿದುವಿಂತ ಕೃಷ್ಣರೂಪಚೆಂದ । ಹಡಗಿನಿಂದ

Sri Vidyabharathi Book Centre, Singeri

CC-O. In Public Domain. Digitized by eGangotri

ಕಡಲು ಧಾಟಿ ಓಡಿ ಬಂದಾ । ಕಡು ಮುದ್ದು ರಂಗ ಮಧ್ವಮುನಿಗೆ ಒಲಿದು ಬಂದಾ ॥೩॥ ನಿನ್ನ ದಾಸ ಜನರ ಸಂಗವನ್ನು ಕರುಣಿಸೋ । ಮುನ್ನ ಮಾಡಿದಾ ಪಾಪವನ್ನು ಹರಿಸೋ । ಬೆಣ್ಣೆ ಕಳ್ಳ ಕೃಷ್ಣ ನಿನ್ನ ರೂಪ ತೋರಿಸೋ । ಚಿಣ್ಣ ಕೃಷ್ಣ ನಿನ್ನ ಚರಣದಾಸಿ ಎನಿಸೋ ॥೪॥ ಎನ್ನ ಕನಸಿನಲ್ಲಿ ನಿನ್ನ ರೂಪ ಕಂಡೆ । ಎನ್ನ ಮಹಿಮ ಇಂದಿರಲೋಲ ವಿಠಲ ಎಂದೆ । ಎನ್ನ ಭವದ ಪಾಶವನ್ನು ಬಿಡಿಸು ಎಂದೆ । ನಿನ್ನ ಚರಣಕೆರಗಿನಾನು ಬೇಡಿಕೊಂಡೆ ॥೫॥

41. ಆನಂದ ಭೈರವಿರಾಗ—ರೂಪಕ ತಾಳ

ಆಕಳು ಕೊಡು ಕೃಷ್ಣಾ । ಗೋಕುಲ ಪತಿ ಸ್ವಾಮೀ । ಆಕಳು ಕರೆಯುವ ವೇಳೆಯಾಯಿತೂ । ಆಕಳು ಮನೆಗೆ ಬರಲಿಲ್ಲಾ ॥ಪ॥ ಆಕಳು ಕಾಣೇನೇ । ಲೋಕ ಸುಂದರಿ ರಾಧೆ । ಬೇಕಾದರೆ ನಿನ್ನಾ ಕಳುಹುಡುಕೇ । ಆಕಳ ಮಂದೆಯಲೀ ॥ಪ॥ ಕಳ್ಳನು ನೀನಹುದೋ । ಸುಳ್ಳುಮಾತು ಗಳೇಕೋ । ಬಲ್ಲೆ ಬಲ್ಲೆನು ನಿನ್ನ ಚಿಲ್ಲಾಟವು ಬಿಡು । ಎಲ್ಲಿ ಆಕಳು ಪೇಳೂ ॥೧॥ ಕಸ್ತೂರಿತಿಲಕ ರಾಧೇ । ಚಿಕ್ಕವನೆನ್ನುತಲೀ । ಠೊಕ್ಕವು ಕೊಡದಿರೇ । ಪುಕ್ಕಟೆಯಲ್ಲವೆ । ಆಕಳು ಕಾಯುವುದೂ ॥೧॥ ಬೇಡಿದ್ದು ಕೊಡುವೆನೋ । ರೂಢಿ ಗೊಡೆಯ ಕೃಷ್ಣಾ । ನಾಡೊಳು ನಿನ್ನ ಸರಿ । ಈಡಿಲ್ಲವುನಾ । ಬೇಡಿಕೊಂಬುವೆನಿನ್ನಾ ॥೨॥ ಆಲ್ಲಿ ನೋಡಿಲೆ ರಾಧೇ । ಮಲ್ಲಿಕ ವನದಲ್ಲೀ । ಹುಲ್ಲನು ಮೇಯುವಾ । ಚಲ್ವಿನಿನ್ನಾ ಕಳು ತೋರುವೆ ನಾನೀಗಾ ॥೨॥ ಆಕಳು ಕೊಡುವೇನೇ । ಅಪ್ಪ ಶ್ರೀ ಕೃಷ್ಣಯ್ಯಾ । ತಪ್ಪನು ಕ್ಷಮಿಸಯ್ಯಾ । ಸರ್ವಶಯನನ । ಮೃಪ್ಪು ಇಂದಿರ ಲೋಲವಿ ಠಲಯ್ಯಾ ॥೩॥ ಆಕಳು ಕಂಡೆನೋ । ಲೋಕ ನಾಯಕ ಸ್ವಾಮೀ । ಶ್ರೀ ಕೃಷ್ಣನೇ ಕೇಳ್ । ಆಕಳು ಕರೆಯಲು ಪೋಗುವೆ ನಾನೀಗಾ ॥೪॥ ಆಕಳು ಕಂಡೆನೋ.

42. ಶಂಕರ ಭರಣ ರಾಗ—ರೂಪಕತಾಳ

ದಾರಿ ತೋರಿರೈ । ದಾರಿ ತೋರಿರೈ । ದಾರಿತೋರಿರೈ ॥ಪ॥ ಹರಿಯ ಭಕ್ತರೇ ನೀವು । ನಾರಾಯಣ ಪುರಕೆ ಹೋಗುವ ॥ಅಪ॥ ಸಿರಿಯರಮಣ ನೂರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇರಿ । ಪಿರಿಯ ಸಹಿತ ಹರಿಯ ನೋಡಿ । ಹರುಷದಿಂದ ನಲಿಯುವಂಥ । ಮರಳಿಧರೆಗೆ ಬಾರದಂಥ ॥೧॥ ಭಕ್ತಿ ಭಾವದಿಂದಲೀ ॥ ಚಿತ್ತವೆಂಬ ಕಡಲಲೀ । ಮುಕ್ತರೊಡೆಯ ಕೃಷ್ಣನ । ನಿತ್ಯದಲ್ಲಿ ಕಾಣುವಂಥ ॥೨॥ ಇಂದಿರಾ ದೇವಿಯನ್ನ । ಇಂದಿರ ಲೋಲ ವಿಠಲನ್ನ ಹೊಂದಿ ಅನಂದ ಪಡು । ಸುಂದರಾ ವೈಕುಂಠಪುರದ ವಿಠಲ । ವಂದಿಸಿ ಬೇಡುವೆ ॥೩॥

43. ಕಾನಡ ರಾಗ—ಮಧ್ಯತಾಳ

ಕಾಲ ಕಳೆಯಲಿಲ್ಲ । ವೃಥಾ । ಕಾಲ ಕಳೆಯಲಿಲ್ಲ ॥ಪ॥ ಶ್ರೀ ಲೋಲ ಕೃಷ್ಣನಾ । ಕಾಲ ಕಾಲದಿ । ನೆನೆಯುತಿರುವೆ ॥ಅಪ॥ ಕೃಷ್ಣನಾ ನಾಮವು । ಕಷ್ಟಹರಿಪುದೆಂಬರು । ಬಿಟ್ಟ ಮೂರುತೀಯ ಮನ । ಮುಟ್ಟಿ ಭಜಿಸುತಿರುವೆ ನಲ್ಲವೆ ॥೧॥ ಹರಿಯ ನಾಮದಿಂದ ಪಾಪ । ಹರಿದುಪೋಪದೆಂಬರು । ಸರುವ ಕಾಲದಲ್ಲಿ ಶ್ರೀ । ಹರಿಯ ನಾಮ ನೆನೆವೆನಲ್ಲವೆ ॥೨॥ ಬೆಂದು ಬಳಲುವ ಭವ । ಬಂಧನ ಬಿಡಿಸಲೋಸುಗ । ಇಂದಿರ ಲೋಲ ವಿಠ್ಠಲನ್ನ । ಒಂದೆ ಮನದಿ ಭಜಿಸುತಿರುವೆ ॥೩॥

44 ಆನಂದಭೈರವಿ ರಾಗ — ಆದಿತಾಳ

ಎಂತ ಮಹಿಮರೋ ಶ್ರೀ । ಕಾಂತನ ಏಕಾಂತ ಭಕ್ತರ । ಎಂತ ಮಹಿಮರೊ ॥ಪ॥ ಅಂತರಂಗದಲ್ಲಿ ಹರಿಯ । ಚಿಂತನೆಯನು ಮಾಡುತಾ । ಮಂತ್ರಿನಾ ಕೃಷ್ಣನಾ । ಮಂತ್ರವು ಪಾಡುವಾರು ॥೨.ಪ॥ ಗೆಜ್ಜೆ ಕಟ್ಟುತಾ ಘಲ್ಲೀರೆಂದು । ಹೆಜ್ಜೆನಿಕ್ಕುತಾ । ಹೆಜ್ಜೆ ಹೆಜ್ಜೆಗೆ ಶ್ರೀ ಹರಿಯ ನಾಮ ಪಾಡುತಾ । ಸಜ್ಜನ ರಕ್ಷಕನ ನಾಮ । ಮೂರ್ಜಗದಲಿ ಸಾರುವಾರು ॥೧॥ ತಾಳ ಹಾಕುತಾ । ತಂಬೂರಿ ಮೀಟುತ । ಬಾಲಕೃಷ್ಣನಾ । ಬಾಲ ಲೀಲೆಗಳನು ಮುದದಿ । ಅಲಸ್ಯವಿಲ್ಲದೇ । ಕಾಲಕಾಲದಿ ಪಾಡುವಾರು ॥೨॥ ಕುಣಿದು ನಲಿವರು । ಚಿನುಮಯ ಮೂರ್ತಿ ನಮ್ಮ । ಕನಕಗಿರಿ ವಾಸ ದೊರೆಯ । ದಣಿಯುವಂತೆನೋಡು ತಾಲಿ । ನುಣಿದು ಭಕ್ತಿ ಬೇಡುವರು ॥೩॥

Sri Vidyabharathi Book Centre, Shringeri

CC-O. In Public Domain. Digitized by eGangotri

ಭಕ್ತ ಜನರಿಗೇ । ಜಗದೊಳೆಲ್ಲ ಭಕ್ತಿ ಬಿತ್ತುತ । ಭಕ್ತಿ ಇಂದ ಭಜಿಸುವರಿಗೆ ಮುಕ್ತಿ ಮಾರ್ಗ ತೋರುತಾ । ಭಕ್ತ ಜನರೆಲ್ಲರನು । ಮುಕ್ತಿ ಮಂಟಪ ಕೊಯ್ಯುವಾರು ॥೪॥ ಸಿಂಧು ಸುತೆಯಳಾ ಸಹಿತಾಗಿ । ನಂದ ತನಯಗೆ ನಿಂದು ಭಕ್ತಿಯಿಂದಲೀ । ವಂದನೆಯನು ಮಾಡುತಾ । ಇಂದಿರಾಲೋಲ ವಿಠ್ಠಲನ್ನ । ಹೊಂದಿ। ಆನಂದ ಪಡುವರೆಂತ ಮಹಿಮರೊ ।೫।

45 ಸಿಂಹೇಂದ್ರ ಮಧ್ಯಮ — ಆದಿತಾಳ

ತೂಗುವ, ಉಯ್ಯಾಲೆಯ । ನಾಗಶೇಣಿಯರೆನೀ । ವೀಗಲೆ ಬನ್ನಿರಿ॥ಪ॥ ನಾಗಶಯನನಾ । ಭೋಗದಲಕುಮಿಯ । ಬೇಗನೆ ಕೂಡಿಸಿ । ರಾಗದಿ ಪಾಡುತ ॥೧ ಪ॥ ರಂಗಾನಾ ಸಹಿತಾಗಿ । ಮಂಗಳೆ ಶ್ರೀ ಲಕುಮೀಗೆ ॥ ಅಂಗನೆಯರು ನಾವ್ । ಶೃಂಗರಿಸುತಲೀ । ಕಂಗಳು ದಣಿಯ ನೋಡುತ । ನೋಡುತ । ಕೊಳಲನೂದುತ ತಾನು । ಲಲನೆಯರ ಮನ ಸೆಳೆವ । ನಳಿನ ನಾಭನು ನಿನ್ನ । ಬಾಲನೇನೇ ॥೧॥ ಅಕ್ಕ ಗೋಪಮ್ಮ ಕೇಳೇ । ರಕ್ಕಸಾಂತಕ ಕೃಷ್ಣ । ಚಿಕ್ಕ ಮಗುವೇನೆ । ರುಕ್ಮಿಣೀ ರಮಣ । ಮಕ್ಕಳಾ ಮಾಣಿಕ್ಯ । ನಿನ್ನಕ್ಕರದ ಮಗನೇನೇ ॥೨॥ ಇಂದು ಮುಖಿಯರ ಕೂಡಿ । ಇಂದಿರಾದೇವಿ ರಮಣ । ಬೃಂದಾವನದೊಳಗೆ । ಆಡುತಿಹನೇ । ಸಿಂಧು ಶಯನಾ ನಮ್ಮ । ಇಂದಿರಾಲೋಲ ವಿಠಲನ । ಚಂದದಲಿ ನೀ ಪೋಗೀ ಕರೆದು ತಾರೇ ॥೩॥

46 ಆಶೀರ್ವಾದ

ಮುತ್ತೈದೆಯಾಗಮ್ಮ ಸಾ । ವಿತ್ರಿ ಯಾಗಮ್ಮ । ಪುತ್ರವತಿ ನೀ ನಾಗು ಮಗುವೇ । ಚಿತ್ತಜಾಪಿತನಲ್ಲಿ । ಭಕ್ತಿ ಉಳ್ಳವಳಾಗು । ನಿತ್ಯ ಸುಖದಲಿ ನೀನು । ಬಾಳು ಮಗುವೇ ॥೧॥ ಅತ್ತೆಮನೆಯಲಿ ನೀನು । ಉತ್ತಮಳು ಎಂದೆನಿಸು । ಹೆತ್ತಮನೆಗೆನೀನು ರತ್ನವೆನಿಸೂ । ಚಿತ್ತದೊಲ್ಲಭಗೆ ಮತ್ತೆಕ್ಲೇಶವ ಕೊಡದೆ । ಉತ್ತುಮಾಸತಿಯುನೀನಾಗು ಮಗುವೇ ॥೨॥ ಮಗನ ತಾಯಾಗಮ್ಮ । ಮಗಳ ತಾಯಾಗುನೀ । ಹಗಲಿರುಳು ಹರಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನೆದೂ ನಗಧರನಸತಿಯನ್ನು । ಪೊಗಳುತಲಿ ಪೂಜಿಸುತ । ಮಿಗೆಹರುಷದಲಿ ನೀನು ಬಾಳು ಮಗುವೆ ॥೩॥ ಧನವತೀ ಯಾಗಮ್ಮ । ಘನವತೀಯಾಗುನೀ । ಗುಣವತೀಯಾಗು ಮಗುವೇ । ಮನದಲಿ ನೀನೀ ಗಜಾನಕೆಯ ಸ್ಮರಿಸುತಲಿ । ಕನಕಲತೆಯಂದದಲಿ ಬಾಳು ನೀ ನೀ ಮಗುನೇ ॥೪॥ ನಿತ್ಯಗೌರಿಯ ಪೂಜೆ । ಮತ್ತೆ ತುಲಸಿಯ ಪೂಜೆ । ನಿತ್ಯದಲಿ ಮಾಡು ಮಗುನೇ । ಭಕ್ತಿಯಿಂದಲಿ ನೀನು । ಮುತ್ತೈದೆತನ ಬೇಡಿ । ಸಮಸ್ತ ಸೌಭಾಗ್ಯವತಿಯು ಆಗಮ್ಮಾ ॥೫॥ ಬಂಧುಬಳಗಕೆ ನೀನು । ಆದರಿಂದ ಕುಸುಮದತೆರದಿ । ಕುದ ನೀ ನಲಿದು ಬಾಳೂ । ಇಂದಿರಾಲೋಲ ವಿಠ್ಠಲನ ಕರುಣದಲಿ । ಕುದ ಆನಂದದಲಿ ಬಾಳು ಚಿರಕಾಲ ॥೬॥

47 ಆಶೀರ್ವಾದ

ಮುತ್ತೈದೆಯಾಗೀ ಬಾಳಮ್ಮ । ಮುತ್ತೈದಾಗೀ ಬಾಳಮ್ಮ ॥೫॥ ಮುತ್ತೈದೆಯಾಗಮ್ಮ । ಅತ್ತೆಯಮನೆಗೀಗ । ಮುತ್ತಿನಂಥಹಾ ಸೊಸೆಯಾಗು । ಮುತ್ತಿನಂಥಹಾ ಸೊಸೆಯಾಗು ಬಾರಮ್ಮ । ಅತ್ತೆಗೆ ಅರ್ಥಿಯ ಮಗಳಾಗು । ಅತ್ತೆಗೆ ಅರ್ಥಿಯ ಮಗಳಾಗು ಪ್ರೇಮದ ಪುತ್ಥಳಿಯಾಗು ಬಾರಮ್ಮಾ ॥೧॥ ಮಾವಗೆ ಮೆಚ್ಚಿನ ಸೊಸೆಯಾಗು ಬಾರಮ್ಮಾ ಮಗನಿಗೆ ಮೋಹದ ಮಡದ್ಯಾಗು । ಮಗನಿಗೇ ಮೋಹದ ಮಡದ್ಯಾಗು ಮಗಳೆ । ಮುದ್ದು ಕಂದನಿಗೇ ತಾಯಾಗು । ಮುದ್ದು ಕಂದನಿಗೇ ತಾಯಾಗು ಬಾರಮ್ಮ । ಮನೆಗೆ ಮಹಲಕ್ಷ್ಮಿ ನೀನಾಗು ॥೨॥ ಭಾವ ಮೈದುನರಿಗೆ ಭಗಿನಿ ನೀನಾಗಮ್ಮ । ಭಾವ ಶುದ್ಧಿಯಲೀ ಕೃಷ್ಣನ್ನ ಭಾವ ಶುದ್ಧಿಯಲೀ ಕೃಷ್ಣನ್ನ ಭಜಿಸುತ್ತ । ಭಾಗ್ಯವತಿಯೂ ನೀನಾಗು ॥೩॥ ಅಕ್ಕತಂಗಿಯರಂತೆ । ಅತ್ತಿಗೆ ನಾದಿನಿಯರಿಗೆ । ಸಕ್ಕರೆಯಂತೆ ಸವಿಯಾಗು ಬಾರಮ್ಮ । ಚೊಕ್ಕ ಬಂಗಾರಾ ನೀನಾಗು । ಚೊಕ್ಕ ಬಂಗಾರ ನೀನಾಗು ಬಾರಮ್ಮ । ರುಕ್ಮಿಣಿ ಯಂಥ ಸೊಸೆಯಾಗು ॥೪॥ ಮಂದಿರಕೇ ನೀನು ನಂದಾ ದೀವಿಗೆ ಯಾಗು । ಮುಂದಾರ ಮಲ್ಲಿಗೆ ನೀನಾಗು । ಮುಂದಾರ ಮಲ್ಲೀಗಿಯಂತೆ ನೀ ನಲಿಯುತ್ತ । ಇಂದಿರಾಲೋಲ ವಿಠಲನಾ । ಇಂದಿರಾಲೋಲ ವಿಠಲನ್ನ ಕರುಣದಲಿ ಚೆಂದಾಗಿ ಬಾಳಮ್ಮ ಚಿರಕಾಲ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

48 ಜಲಕ್ರೀಡೆ

ಬಾರೆ ಭಾಮಿನಿ । ಶರದ ಋತುವಿದು । ಸಾರಿ ಪೋಗುವ ನಾವೀಗಾ ॥
ಪರಮಪಾವನೆ । ಹರಿಯಮುನೆಯ । ವರಜಲದಿ ಸ್ನಾನ ಗೈಯುವಾ ॥೧॥
ವಿಂದು ಮಡಿಯುಟ್ಟು । ಚೆಂದದಲಿ ನಾವ್ । ಮುಂದಹಾಸನ ಬೀರುತಾ ॥
ಇಂದುಧರ ಸತಿ । ಸುಂದರಾಂಗಿಯ । ಚೆಂದದಲಿ ನಾವ್ ಪೂಜಿಪ ॥೨॥
ಪರಿಮಳದ ದ್ರವ್ಯ । ಪಾರಿಜಾತದಿ । ವರಕಲ್ಯಾಣಿಯ ಪೂಜಿಸಿ ॥ ವರ
ಕಾತ್ಯಾಯನಿ । ಗೌರೀ ದೇವಿಗೆ । ಆರತಿಯನ್ನೂ ಬೆಳಗುವಾ ॥೩॥ ಪರಮ
ಭಕ್ತಿಲಿ । ಹರನರಾಣಿಯ । ಚರಣ ಗಳಿಗೇ ಎರಗುವಾ ॥ ಮುರಳೀ
ಲೋಲನ । ಕರಪ ಪಿಡಿಯುವ । ತೆರನ । ಮಾಡೆಂದು ಬೇಡುವಾ ॥೪॥
ಬಾಸಿನಲಿ ಸಖಿ । ಭಾನು ಬೆಳಗುವ । ಮುನ್ನವೇ ಪೂಜೆ ಗೈಯುವಾ ॥
ವಾಸಿಸಿಯರು ನಾವ್ । ಮೌನವ್ರತದಲಿ । ಪೌನರ್ಭವಿಯ ಪೂಜಿಸೇ ॥೫॥
ಎನುತ ಹೊರಟರು । ವನಜ ಮುಖಿಯರು । ಮನದಿ ಕೃಷ್ಣನ ನೆನೆಯುತಾ ॥
ಕನಕಲತೆಯು । ಮಿನುಗುವಂದದಿ । ವಸಿತೆಯರು ತಾವ್ ಬಳಕುತ ॥೬॥
ಸೀರೆಗಳನು । ತೀರದಲ್ಲಿಟ್ಟು । ನೀರಿಗೆ ತಾವಿಳಿದರು ಸಾರಸಾಕ್ಷಿಯರ್ ।
ಸರಸದಿಂದಲಿ । ಪರಮ ಹರುಷದಿ ನಲಿಯುತಾ ॥೭॥ ಕರದಿ ನೀರನು ।
ಭರದಿ ತೆಗೆದು । ಸಂದು ಸಖಿಯರಿಗೆರಚುತಾ ॥ ಹರಿವ ಯಮುನೆಯ ।
ಸಿರಿಯ ಸೊಬಗನು । ಬೆರಗಿನಿಂದಲಿ ನೋಡುತಾ ॥೮॥ ನಾರಿಯರು ತಾವ್ ।
ಹರಿವ ನದಿಯಲಿ । ಭರದಿ ಮುಳುಗೇಳುತಾ । ನೀರೆ ತಪ್ಪೋ । ಪರಿವೆ
ಇಲ್ಲದೆ ನೀರು ಆಟವನಾಡುತಾ ॥೯॥ ಸಾರಸಾಕ್ಷಿಯರ । ತೆರದಲಿಹರು ।
ನೂರಾರು ಗೋಪಿಕ ಸ್ತ್ರೀಯರು ॥ ಬಾರಿಬಾರಿಗು । ತರುಣಿಯೆಲ್ಲರು । ವಿಹರಿ
ಸಂತಸ ಪಡುತಲೀ ॥೧೦॥ ರಮಣಿಯರು ತಾವ್ । ಯಮುನೆಯಲ್ಲೀ ।
ರಮಿಸುತಲಿ ಮೈಮರೆತರು ॥ ಸಮರು ಇಹರೇ । ತಮಗೆ ಎನುತಲಿ ।
ಕಾಮಿನಿಯರೂ ತಿಳಿದರು ॥೧೧॥ ಸಮಯ ನೋಡುತ । ಕಮಲನಾಭನು ।
ಯಮುನ ತೀರಕೆ ಬಂದನು ॥ ವಿಮಲ ಮುಖಿಯರ । ಅಮಲ ವಸ್ತ್ರವ ।
ತಾಮಲಾಂಗನು ಕದ್ದನು ॥೧೨॥ ನೀರೆ ಕಮ್ಮಾ । ಏರಿ ಮರವನು । ಧೀರ

CC-O. In Public Domain. Digitized by eGangotri

ನಂದದಿ । ಕುಳಿತನು ॥ ಜಾರ ಕೃಷ್ಣನು । ನಾರಿಯರ ನೀರಾಟವನ್ನೆ
ನೋಡುತಾ ॥೧೩॥ ವೇಳೆಯಾಗಲು । ಬಾಲೆಯರು ತಾವ್ । ಶಾಲೆಗಳನೂ
ಧರಿಸಲೂ ॥ ಶಾಲೆ ಕಾಣದೆ । ಬಳಲಿದರು ತಾವ್ ಲಲನೆಯರು ಮೈ
ಬೆನರುತಾ ॥೧೪॥ ಕೇಳಿಲೇ ಸಖೀ । ಶಾಲೆನಮ್ಮದು । ಎಲ್ಲಿ ಪೋದವು ।
ಪೇಳಿಲೇ ॥ ಬಾಲೆಯರು ನಾವ್ ಶಾಲೆ ಇಲ್ಲದೆ । ಎಲ್ಲಿ ಪ್ರೋಗುಪ
ಪೇಳಿಲೇ ॥೧೫॥ ಮಾಸಿನೀ ಮಣಿ । ಮನದ ದುಗುಡಕೆ । ಏನು ಮಾಡಲಿ
ಪೇಳಿಲೆ ॥ ಮಾನ ಹೋದರೆ । ಪ್ರಾಣ ಉಳಿಯದು । ಜಾಣೆ ನೀನೀಗ
ಕೇಳಿಲೇ ॥೧೬॥ ಲಕ್ಷ ಸೀರೆಯು । ಈ ಕ್ಷಣವಲೀ । ಚಕ್ಷುಗಳಿಗೇ ಕಾಣದೇ ।
ಪಕ್ಷವಾಹನ । ಲಕ್ಷ್ಮಿ ರಮಣ । ಈ ಕ್ಷಣವಿ ತಾ ಬರುವನೇ ॥೧೭॥ ಹರಿಪ
ಯಮುನೆಲಿ । ನಾರಿ ನಾವೆಲ್ಲ । ಸೇರಿ ಘಮುಕುವ ಬನ್ನಿರೇ । ಬೇರೆ
ದಾರಿಯ । ತೋರದೆಲೆ ಸಖಿ ನೀರಿ ನೀವೆಲ್ಲ ಪೇಳಿರೇ ॥೧೮॥ ಉಕ್ಕಿ
ಬರುತಿಹ । ದುಃಖದಿಂದಲ್ಲಿ । ಬಿಕ್ಕಳಿಸುತಾ ಸಖಿಯರು । ಚೊಕ್ಕ ಹೆಣ್ಣು
ಮಕ್ಕಳು ನಾವ್ । ಅಕ್ಕ ಎಲ್ಲೀ ಪೋಪೆವೆ ॥೧೯॥ ವಾರಿ ಧಾರೆಯ ।
ಸುರಿಸುತಲಿ ತಾವ್ । ನೀರಿದುಃಖವು ಪಡುತಿರೇ । ನಾರಿಯರನು ।
ಪರಿಯು ನೋಡುತ । ಕರುಣವನ್ನೇ ಬೀರಿದಾ ॥೨೦॥ ಗಲಭೆ ಮಾಡುತ ।
ಎಲೆಯನುದುರಿಸಿ । ಲಲನೆಯರ ನೆಚ್ಚರಿಸಿದಾ । ಬಾಲೆಯರು ತಾವ್ ।
ಮೇಲೆ ನೋಡುತ । ಜಲಜ ನಾಭನ ಕಂಡರು ॥೨೧॥ ಸಾಲುಸಾಲಲಿ ।
ಶಾಲೆಗಳನು । ಮೇಲೆ ಮರದಲಿ ಕುಡರು । ಶಾಲೆಗಳ ಕದ್ದ । ನೀಲ
ಮೇಘನ । ಬಾಲೆಯರೆ ನೀವ್ ನೋಡಿರೇ ॥೨೨॥ ಗೊಲ್ಲತಿಯರೆ । ಜೆಲ್ಲ
ಕೃಷ್ಣನ । ಎಲ್ಲ ಬೇಡುವ ಬನ್ನಿರೇ । ನಿಲ್ಲದೆಲೆ ನೀ । ವೆಲ್ಲಬ ನ್ನಿರೆ । ಗೊಲ್ಲ
ಕೃಷ್ಣನ ಬೇಡುವ ॥೨೩॥ ಹೊಳೆವ ಪಾದಕೆ । ಮಳಯು ಗೆಜ್ಜೆ । ಒಲವಿ
ನಲಿ ನಾಕಟ್ಟುವೆ । ನಳಿನಲೋಚನ । ಹೊಳೆವಹೂವಿನ । ಕೊಡುವಿಯಾ
ನನ್ನ ಸೀರೆಯಾ ॥೨೪॥ ಮಡಿಯನುಡಿಸುವೆ । ಒಡವೆ ಇಡುವೆ । ಕಡಲ
ಶಯನಾ ನಿನಗೆ ನಾ । ಉಡುಪ ಮುಖನೆ ।ಬೆಡಗಿನಂಚಿನ । ಕೊಡುವೆಯಾ
ನನ್ನ ಸೀರೆಯಾ ॥ಕೃಷ್ಣ॥ ॥೨೫॥ ನಡುವಿನಲ್ಲೀ । ಉಡಿದಾರವನೂ ।
ಉಡಿಯ ಗೆಜ್ಜೆ ಕಟ್ಟುವೆ । ಪೊಡವಿಗೊಡೆಯ । ಕೊಡದ ಹೊನ್ನಿನ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡುವೆಯಾ ನನ್ನ ಸೀರೆಯ ಕೃಷ್ಣ । ॥೨೬॥ ಕರದಿ ಕಂಕಣ । ಬೆರಳ
ಉಂಗುರ । ಮೆರೆವ ನಂಕೀ ಇಡುವೆನು । ಸರಸಿಜಾಕ್ಷಾ । ಜರಿಯ ಅಂಚಿನ
ಕೊಡುವೆಯಾ ನನ್ನ ಸೀರೆಯ ॥೨೭॥ ಹಾರ ಪದಕವು । ಕೊರಳಿಗ್ಹಾಕುವೆ।
ಬಾರಿಬಾರಿಗು ನೋಡುವೆ । ಮುರಳಿ ಲೋಲನೆ । ಮಿರಗು ತಾರೆಯ ।
ಕೊಡುವೆಯಾ ನನ್ನ ಸೀರೆಯ ॥ಕೃಷ್ಣ॥ ॥೨೮॥ ಮಂಡೆ ಬಾಚುವೆ ।
ದಂಡೆ ಮುಡಿಸುವೆ । ಕುಂದಲವು ನಾಸಿಡುವೆನು । ಪಾಂಡುರಂಗನೆ । ಕಂದಿ
ಅಂಚಿನ ಕೊಡುವಿಯಾ ನನ್ನ ಸೀರೆಯ ॥೨೯॥ ಹೆರಳು ಹಾಕುವೆ ।
ಕುರುಳು ತಿದ್ದುವೆ । ಮೆರೆವ ತಿಲಕವ ನಿಡುವೆನು । ಗರುಡವಾಹನ । ಗೆರೆಯ
ಜರಿಯ । ಕೊಡುವೆಯಾ ನನ್ನ ಸೀರೆಯಾ ॥ಕೃಷ್ಣ॥ ॥೩೦॥ ಉತ್ತು
ಮಾಂಗಕೆ । ಮುತ್ತು ಕುಚ್ಚನು । ಸುತ್ತುವೆನು ನಾನೀಗಲೇ । ಚಿತ್ತಜಾಪಿತ।
ಮುತ್ತಿನಂಚಿನ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೧॥
ಸೋಗೆ ಗಣ್ಣಿಗೆ । ಸೋಗೆ ತಿದ್ದುವೆ । ನಾಗಶಯನನಾ ನಿನಗೆ ನಾ । ಬಾಗಿ
ಬೇಡುವೆ । ಬುಗಡಿ ಅಂಚಿನ ಕೊಡುವಿಯಾ ನನ್ನ ಸೀರೆಯಾ ॥ಕೃಷ್ಣ॥ ॥೩೨॥
ಪುಟ್ಟ ಗಲ್ಲಕೆ ದೃಷ್ಟಿ ಬಟ್ಟೂ । ಇಟ್ಟು ಸಂತಸ ಪಡುವೆನು । ಪುಟ್ಟ
ಕಂದಯ್ಯ । ಪಟ್ಟಿ ಅಂಚಿನ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೩॥
ಕವಣಿ ಕಲ್ಲನು । ಜವದಿಕೊಡುವೆನು । ನವಿಲು ಗರಿಯಾ ಸೆಕ್ಕುವೇ । ದಿವಿಜ
ರೊಡೆಯ । ನವಿಲು ಬಣ್ಣದ । ಕೊಡುವಿಯಾ ನನ್ನ ಸೀರೆಯ॥ಕೃಷ್ಣ॥ ॥೩೪॥
ನೀಲಮೇಘನೆ । ಬಾಲಕೃಷ್ಣನೆ । ಬಾಲ ಗೋಪೀನಾಥನೆ । ನೀಲಲೋಚನ।
ಸಾಲು ಹೂವಿನ ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೫॥ ಮುತ್ತು
ಕೊಡುವೆನು । ಎತ್ತಿಕೊಳುವೆನು । ತುತ್ತು ಮಾಡೀ ಉಣಿಸುವೆ । ಮತ್ತೆ
ಬೇಡುವೆ । ರತ್ನದಂಚಿನ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೬॥
ನಳಿನ ನಾಭನೆ । ಕೊಳಲ ಕೃಷ್ಣನೆ । ಹೊಳೆವ ಮುದ್ದಾ ರಂಗನೆ । ಮೊಳದ
ಜರಿಯ । ಬಿಳಿಯ ಪತ್ತಲ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೭॥
ಇಂದ್ರನೆನ್ನುವೆ । ಚಂದ್ರ ನೆನ್ನುವೆ । ನಾಂದ್ರ ಸುಗುಣ ನೆನ್ನುವೇ । ಇಂದಿ
ರೇಶಾ ।ಚಂದ್ರ ಬಣ್ಣದ। ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೮॥ ರಾಜಿ
ಸುತಲಿಪ । ಸೂಜಿ ಮಲ್ಲಿಗೇ । ಜಾಜಿಹಾರವ ಹಾಕುವೆ । ರಾಜೀವಾಕ್ಷಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

ರೋಜ ಬಣ್ಣದ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೩೯॥ ಯಾದ
ವೇಂದ್ರನೇ । ವೇದಪುರುಷನೇ । ಮಾಧವಾ ನಿನ್ನ ಬೇಡುವೇ । ಬಾದ
ರಾಯಣ । ಬೂದು ಬಣ್ಣದ ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೪೦॥
ಉದಧಿಶಯನನೆ । ಪದುನುನಾಭನೇ । ಮದನ ಮೋಹನ ಕೃಷ್ಣನೇ ।
ಮುದದಿ ಬೇಡುವೆ । ಪದುಮದಂಚಿನ ॥ ಕೊಡುವಿಯಾ ನನ್ನ ಸೀರೆಯ
॥ಕೃಷ್ಣ॥ ॥೪೧॥ ಶಾಮವರ್ಣನೆ । ಕೋಮಲಾಂಗನೆ । ಕಾಮಿನಿಯರಾ
ಪ್ರಿಯನೇ । ಭಾವೆಯರಸನೇ । ಹೇಮವರ್ಣದ । ಕೊಡುವಿಯಾ ನನ್ನ
ಸೀರೆಯ ॥ಕೃಷ್ಣ॥ ॥೪೨॥ ಅಣ್ಣ ಕೃಷ್ಣನೆ । ಚಿಣ್ಣ ಕುದನೆ । ಬೆಣ್ಣೆ ನಿನಗೆ
ಕೊಡುವೆನು ಸಣ್ಣ ಹೂನಿನ ಎಣ್ಣೆಕೆಂಪೆನಿನಗೇ ಕೊಡುವಿಯಾ ನನ್ನ ಸೀರೆಯ
॥ಕೃಷ್ಣ॥ ॥೪೩॥ ಪುಲ್ಲಜೆಲ್ವ ಕೃಷ್ಣನೇ । ಗಲ್ಲಪಿಡಿಮಾ ಬೇಡುವೆ । ಮಲ್ಲ
ಮರ್ದನ ಬಳ್ಳಿ ಆಂಚಿನ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ಬೆಟ್ಟು।
ಬಾಯೊಳುಇಟ್ಟುಕೊಂಡಿಹ । ಪುಟ್ಟ ಕೃಷ್ಣ ವೇನನೇ । ಬೆಟ್ಟದೊಡೆಯ ।
ಬುಟ್ಟದಾರಿಯ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥॥೪೫॥ ರಕ್ಕಸಾಂತಕ
ರುಕ್ಮಿಣೀಶನೆ । ಮುಕ್ಕಳಾ ಮಾಣಿಕ್ಯವೆ । ಚೊಕ್ಕ ಚಿನ್ನದ । ಚುಕ್ಕೆ
ಜರಿಯ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೪೬॥ ಸುಂದರಾಂಗನೆ।
ಮಂದಹಾಸನೇ । ಕಂದನಿನ್ನ ಬೇಡುವೇ । ಸಿಂಧುಶಯನಾ । ಕಂದ।
ಬಣ್ಣದ ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೪೭॥ ನೀಲಕುಂತಲ ।
ಬಾಲನಿನ್ನಯ । ಕಾಲಿಗೇ ನಾನೆರಗುವೆ । ಶಾಲೆ ನನ್ನದು । ನೀಲಿ ಬಣ್ಣದ ।
ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೪೮॥ ಅಚ್ಚ ಮಲ್ಲಿಗೆ । ಪಚ್ಚೆ
ತೆನೆಯ । ಕುಚ್ಚು ಮುಡಿಗೇ ಕಟ್ಟುವೇ । ಅಚ್ಚುತನೆ ನನ್ನ ಪಚ್ಚೆ ಬಣ್ಣದ ।
ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೪೯॥ ಆವುಕಾಯುವ ।
ಗೋವಳನೆ ನಿನ್ನ । ಗೋವಿಂದಾನೆಂದು ಕರೆಯುವೇ । ಸಾವಿರ್ನಾಮದ ।
ಭಾವಭಕುತಿಯ । ಕೊಡುವಿಯಾ ನನ್ನ ಸೀರೆಯ ॥ಕೃಷ್ಣ॥ ॥೫೦॥ ವಾರಿ
ಧಾರೆಯ । ನಾರಿಯರನು । ವಾರಿಜಾಕ್ಷ ನೋಡಿದಾ । ನಾರಿಯರೆ ನಿಮ್ಮ ।
ಸೀರೆಕೊಡುವೆನು । ಸಾರಿ ಬನ್ನಿರಿ ಈಗಲೇ ॥೫೧॥ ಮಂದಹಾಸದಿ ।
ಇಂದು ಮುಖಿಯರು । ಒಂದು ಕೈಯಲಿ ವಂದಿಸೇ । ಒಂದು ಕೈಯಲಿ ।

Sri Vidyabharathi Book Centre, Sringeri

CC-O. In Public Domain. Digitized by eGangotri

ವಂದನೆಯು ಇದು । ಚಂದವಲ್ಲವು ಕೇಳಿರೇ ॥೫೩॥ ನೀರು ಬಿಟ್ಟೂ । ಏರಿ ಬನ್ನಿರಿ । ಎರಡು ಕರವಾ ಮುಗಿಯಿರಿ । ತರುಣಿಯರೆ ನೀವ್ ಬಾರದಿರಲು । ಮರುಕವೆನಗೇ ಬಾರದು ॥೫೩॥ ಹರದೆರೆಲ್ಲರು । ಪರಮ ಭಕುತಿಲಿ । ಶರಧಿ ಶಯನಾ ಕೃಷ್ಣಗೇ । ಶಿರವಬಾಗಿ ಕರುಣಿಸೆನುತ । ಎರಡು ಕರವೆತ್ತಿ । ಮುಗಿದರು ॥೫೪॥ ಬಾಲಕೃಷ್ಣನು । ಲಲನೆಯರಿಗೆ । ಒಲಿದು ವಸ್ತ್ರವ ಕೊಟ್ಟನು । ಶಾಲೆಗಳನುಟ್ಟು । ಗೆಲುವಿನಿಂದಲಿ ಜಲಜನಾಭಗೆ ವಂದಿಸಿ ॥೫೫॥ ಪರಮ ಭಕುತಿಲಿ । ಸಿರಿಯರವಣಗೇ । ಶಿರವಬಾಗೀ ನಮಿಸುತಾ । ಕರುಣ ಮೂರ್ತಿ । ಪ್ಪೊರೆಯೋ ಎನುತಾ । ಕರವ ಮುಗಿದೂ ಬೇಡುತಾ ॥೫೬॥ ಇಂದು ಮುಖಿಯರು । ಒಂದೆ ಮನದಲಿ । ಇಂದಿರಾಲೋಲ ವಿಠಲನ । ಹೊಂದಿಗಾನದಿ । ಪಾಡಿಪೊಗಳುತ । ಬಂದು ಮನೆಯ ಸೇರ್ದರು ॥೫೭॥

49 ಮನೆವಾರ್ತೆ (ಸರ್ವಸಮರ್ಪಣ)

ಶ್ರೀಕೃಷ್ಣ ದಾಸನಾನು । ಸೇವೆಯುಮಾಳ್ಪ ॥ಪ॥ ಉದಯಕಾಲದೊ ಳೆದ್ದು । ಮದನಮೋಹನ ಕೃಷ್ಣ । ಪದ್ಮನಾಭನನೂ । ಮುದದಿಂದ ನೆನೆವಂಥ ॥೧॥ ನೃತ್ತಿಕಶೌಚಮಾಡಿ । ಮತ್ತೆ ಮುಖವನ್ನೆ ತೊಳೆದು ಕಸ್ತೂರಿತಿಲಕವಿಟ್ಟು । ಮತ್ತೆ ಕೃಷ್ಣನ ನೆನೆವ ॥೨॥ ಮಡಿಯ ಪಟ್ಟಿಗೆ ಹೊತ್ತು । ಕೊಡವು ಶರಪಳ್ಳಿಯಿಟ್ಟು । ಕಡಲ ಶಯನನ ನೆನೆದು । ನಡೆದು ನಾ ಬರುವಂಥ ॥೩॥ ತಾರೆಯ ಬೆಳಕಲಿ । ದಾರಿ ನಡೆಯುತ್ತ ಬರಲು ದೂರದಿ ಯಮುನೆ ಕಂಡು । ವಿೂರಿ ಮೈ ಉಬ್ಬುವಂಥ ॥೪॥ ಬಿಂದೀಗೆ ಯನುನಾ । ದಂಡೆಯ ಮೇಲಿಟ್ಟು । ಸುಂದಾಹಾಸದಿ ಯಮುನೆ । ಗೂಂದೀಸಿ ಹರುಷ ಪಡುವ ॥೫॥ ಸುಂದಾರ ಯಮುನೆಯ । ಕೂಡು ಆನಂದದಿ । ನಿಂಮೂ ಭಕ್ತಿಯುಲೀ । ಜೆಂದಾನೋಡುವಂಥ ॥೬॥ ಹರಿಯ ಪೂಜೆಗೆ ನಾನು । ವರ ಜಲದಿ ಸ್ನಾನಮಾಡೇ ಸುರರಾ ಆಜ್ಞೆಯನೂ । ಕರ ಮುಗಿದು ಬೇಡುವಂಥ ॥೭॥ ಪರಮಪಾವನೆಯಾದ ಹರಿವ ಯಮುನೆಯಲ್ಲಿ । ತರಿಶಿನ ಹಚ್ಚಿ ಸ್ನಾನ । ಹರುಷದಿ ಮಾಡುವಂಥ ॥೮॥ ದಡವನ್ನು ಏರಿ

CC-O. In Public Domain. Digitized by eGangotri

ಬಂದು । ಮಡಿಯ ಪೆಟ್ಟಿಗೆ ತೆಗೆದು । ಸಡಗರದಿಂದುಡುವ । ಮಡಿಯು
ಶ್ರೀಕೃಷ್ಣನೆಂಬ ॥೯॥ ಶಂಕ ಚಕ್ರದ ಜರಿ । ಅಂಕಿತ ವಿರುವ ಸೀರೆ ।
ಪಂಕಾಜಾಕ್ಷನು ಕೊಟ್ಟ । ಬಿಂಕಾದಿಂದುಡುವಂಥ ॥೧೦॥ ಉಟ್ಟಿದ್ದ
ವದ್ದಿ ವಸ್ತ್ರ । ಕಟ್ಟುತ ವೃಕ್ಷಕೇ । ತೊಟ್ಟೂ ಕಂಚುಕವನು । ಕೃಷ್ಣನ
ನೆನೆವಂಥ ॥೧೧॥ ಪದುಮನಾಭನ ನೆನೆದು । ಗವೆ ಕುಂಕುಮವ ನಿಟ್ಟು
ಶ್ರದ್ಧಾಭಕ್ತಿಯಲೀ । ಶುದ್ಧಾಚಮಾನ ಮಾಳ್ಪ ॥೧೨॥ ಪರಮ ಭಕ್ತಿಯಲೀ ।
ಗುರುಗಳ ಸ್ಮರಿಸುತ । ಗುರುಮಂತ್ರ ಜಪಿಸುತ । ಹರಿಗೆ ಅರ್ಪಿತವೆಂಬ ॥೧೩॥
ರಂಗಾನ ಸ್ಮರಿಸುತ । ಮಂಗಾಳ ದ್ರವ್ಯದಿ । ಮಂಗಾಳ ಯಮುನೆ ತರಂಗೀಣಿ
ಪೂಜಿಪಂಥ ॥೧೪॥ ಕಟ್ಟಿದ ವಸ್ತ್ರ ತೆಗೆದು । ಪೆಟ್ಟಿಗೆಯೊಳಗಿಟ್ಟು ।
ಹೊತ್ತೂ ನೀರಿನ ಕುಂಭ । ಥಟ್ಟಾನೆ ಬರುವಂಥ ॥೧೫॥ ಶೃಂಗಾರವಾದ
ಜಡೆ । ಬಂಗಾರಂಗಳಿಟ್ಟು । ರಂಗೂಮಾಣಿಕದ ರಾಗಟೆ । ರಂಗಗರ್ಪಿಸುವ
॥೧೬॥ ಕಣ್ಣಿಗೆ ಕಪ್ಪನಿಟ್ಟು ಕನ್ನಾಡಿಮುಂದೆ ನಿಂತೂ । ತನ್ನಾ ಚಲ್ವಿ
ಕೆಯನು । ಚೆನ್ನಿಗ ಚಲುವಗೆಂಬ ॥೧೭॥ ಸರ್ವಾಭರಣವಿಟ್ಟು ।
ಸರ್ವಾಲಂಕಾರಳಾಗಿ । ಶರ್ವಾದಿ ವಂದ್ಯನಿಗೆ । ಸರ್ವವು ಅರ್ಪಿಸುವ ॥೧೮॥
ಹರುಷದಿಂದಲಿ ನಾನು ಹರಿಗೆ ಅರ್ಪಿತವಾದ । ಸುರ ಕುಸುಮ ಮಾಲೆಯನು।
ಶಿರದಲ್ಲಿ ಮುಡಿವಂಥ ॥೧೯॥ ರಾಜಗೋಪಾಲನ । ಪೂಜೆಗೆನುತ ನಾನು ।
ರಾಜೀವಾಕ್ಷನ ನೆನೆದು । ಪೂಜಾಸಾಧನ ನಿಡುವ ॥೨೦॥ ಉಡುವ ಮಡಿ
ಗಳು । ಒಡವೆ ಆಭರಣಗಳು । ಉಡುಪಿ ಶ್ರೀ ಕೃಷ್ಣನೆಂದು । ಸಡಗರದಿಂ
ದಿಡುವ ॥೨೧॥ ಪುಷ್ಪ ಫಲಗಳೂ । ಭಕ್ಷ್ಯ ಭೋಜ್ಯಗಳು । ಪಕ್ಷೀವಾಹನ
ನಾದ । ಲಕ್ಷ್ಮೀ ರಮಣನಿಗಿಡುವ ॥೨೨॥ ಪರಿಮಳ ದ್ರವ್ಯಗಳು । ಪರಿಪರಿ
ಪುಷ್ಪಗಳು । ವರಧೂಪ ದೀಪಗಳು । ಮುರಳೀಲೋಹನನೆಂದು ॥೨೩॥
ಕಡೆಗೋಲು ಚೆನ್ನನೀಗೆ । ದಧಿ ಘೃತ ಕ್ಷೀರವಿಟ್ಟು । ಕಡೆದ ಬೆಣ್ಣೆಯ
ನಾನು । ಕಡು ಭಕ್ತಿ ಇಂದಲಿಡುವ ॥೨೪॥ ಕೊಡವು ಕೊಂಕುಳಲಿಟ್ಟು
ಹೆಡಿಗೆ ಶಿರದಲ್ಲಿ ಇಟ್ಟು ಉಡುಪಿ ಕೃಷ್ಣನ ಗುಡಿಗೆ । ನಡೆದು ನಾ ಬರುವಂಥ
॥೨೫॥ ತೆರೆದ ದ್ವಾರದಿ ನಾನು । ಹರುಷಾದಿಂದಾಲಿ ಬರಲು । ಪರಮಾ
ಪುರುಷನಾ । ವರನಿಶ್ವರೂಪ ಕಂಡ ॥೨೬॥ ಗೆಜ್ಜೆಯು ಕೇಳದಂತೆ ಹೆಜ್ಜೆ ।

CC-O. In Public Domain. Digitized by eGangotri

ಇಡುತ ಬರಲು । ಹೆಜ್ಜೆಯ ನಾಲಿಪ । ರಾಜಿಪಯತಿಯ ಕಂಡ ॥೨೭॥
ಬ್ರಹ್ಮ ತೇಜಸ್ಸಿನಿಂದ । ಹೊಮ್ಮುವಾನಂದದಿಂದ । ರಮಣೀಯರಾದ
ಯತಿಗೆ । ನಮಿಸಿ ನಾ ಪೋಗುವಂಥ ॥೨೮॥ ಗುಡಿಯ ಒಳಗೆ ಪೊಕ್ಕು ।
ಪೆಡಿಗೆಯಸಿಳಿಸುತ್ತ । ಕಡೆಗೋಲು ಕೃಷ್ಣನಾ । ಅಡಿಗೇನಾನಮಿಸುವ ॥೨೯॥
ಮುದ್ದು ಕೃಷ್ಣನ ಮುಂದೆ । ಪದ್ಮಾಸನದಿ ಕುಳಿತು । ಶುದ್ಧಾ ಭಾವದಿ ಅನಿ ।
ರುದ್ಧನ್ನ ಪೂಜಿಸುವ ॥೩೦॥ ದಾನವಾಂತಕನಿಗೆ । ಸ್ನಾನವು ಮಾಡಿಸುತ ।
ಚಿನುಮಯ ರೂಪನೀಗೆ । ಆನಂದಾದಿ ಒರಿಸುವ ॥೩೧॥ ಕಡು ಭಕ್ತಿ
ಇಂದಲಿ । ಮಡಿಯನ್ನೆ ಉಡಿಸುತ್ತ । ನಡುವೀಗೆ ಮಡಿಯ ಕಟ್ಟಿ । ಉಡಿಗೆ
ಒಡ್ಯಾಣಸಿಡುವ ॥೩೨॥ ಒಲ್ಲೀ ಹೊದ್ದಿಸುತ್ತ । ಜೆಲ್ವಾ ಶ್ರೀಕೃಷ್ಣನ ।
ಜೆಲ್ವಾಫಣಿಗೆನಾ । ತಿಲುಕಾವ ತೀದ್ದುವ ॥೩೩॥ ಗೆಜ್ಜೆ ಪಾಡಗನಿಟ್ಟು ।
ವಜ್ರದ ಪಂಕಿನಿಟ್ಟು । ಗುಜ್ಜು ರೂಪದ ಹರಿಗೆ । ವಜ್ರದುಂಗುರ ವಿಡುನ
॥೩೪॥ ಹರಡಿ ಕಂಕಣವಿಟ್ಟು । ಹಾರ ಪದಕವು ಹಾಕಿ । ಮುರಳಿಗೆ
ನೋಹನಗೆ । ಅರಳೆಲೆ ಕಟ್ಟುವಂಥ ॥೩೫॥ ಪುಟ್ಟ ಕೃಷ್ಣನಿಗೆ । ದೃಷ್ಟಿ
ಬೊಟ್ಟನಿಟ್ಟು । ದೃಷ್ಟೀಸಿ ನೋಡುತ್ತ । ತುಷ್ಟೀಯ ಪಡುವಂಥ ॥೩೬॥
ಕುಸುಮ ದಂಡೆಯ ಕಟ್ಟಿ । ಕುಸುಮ ಮಾಲೆಯು ಹಾಕಿ । ಯಶೋದೆ ಕಂದ
ನೀಗೆ । ಹೊಸ ಬೆಣ್ಣೆ ಕರದಲಿಡುವ ॥೩೭॥ ಉತ್ತುಮಾಂಗಕೆನಾ ।
ಮುತ್ತೂ ಕುಚ್ಚನೆ ಕಟ್ಟಿ । ಒತ್ತೀಗಲ್ಲಕೆನಾ । ಮುತ್ತಿಟ್ಟು ಕೊಳ್ಳುವಂಥ ॥೩೮॥
ಪರಮ ಭಕ್ತಿಯಲೀ । ಪರಿಮಳ ದ್ರವ್ಯದಿ । ಹರಿಪಾದ ಪೂಜೆಯನು ।
ಹರುಷದಿ ಮಾಡುವಂಥ ॥೩೯॥ ಸರ್ವಬಕ್ಷಗಳೂ । ಸರ್ವಫಲಗಳು ।
ಶರ್ವಾದಿವಂದ್ಯನಿಗೆ । ಸರ್ವವು ಅರ್ಪಿಸುವ ॥೪೦॥ ಶೃಂಗಾರವಾದ ಶ್ರೀ ।
ರಂಗಾಗೆ ಭಕುತಿಲಿ । ಮಂಗಳಾರಾಡಿಭವ । ಭಂಗಾವ ಬಿಡಿಸೆಂಬ ॥೪೧॥
ನೀಲವರ್ಣನಸುತ್ತ । ಕೋಲನಾಡುತ ನಾನು । ನಲಿದೂ ನರ್ತನಸೇವೆ ।
ಸಲಿಸಿನಾ ಪಾಡುವ ॥೪೨॥ ಪಕ್ಷಿವಾಹನಗೆ । ಪ್ರದಕ್ಷಿಣೆ ಮಾಡುತ್ತ । ಲಕ್ಷ್ಮೀ
ರಮಣದೇವ । ರಕ್ಷಿಸು ಎನುತ ನಮಿಪ ॥೪೩॥ ಚಿತ್ತಾಜಪಿತನಾ । ನಿತ್ಯಾವು
ಭಕುತಿಲಿ । ಅರ್ಥಿಲಿಪೂಜಿಸುತ । ಭಕ್ತೀಯ ಬೇಡುವ ॥೪೪॥ ಯತಿವರ್ಯರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೆನಾ । ಅತಿಭಕ್ತಿಯಿಂದ ನಮಿಸಿ । ತೀರ್ಥಸೇವಿಸಿ ಮಂತ್ರಾ । ಕ್ಷತೆಯ ನಾ ಕೊಳ್ಳುವಂಥ ॥೪೫॥ ಸಿಂಧುಶಯನಭವ । ಬಂಧನ ಬಿಡಿಸೆಂದು । ಇಂದಿರ ಲೋಲ ವಿತಲ ಗೊಂದೀಸಿ ಪೋಗುವ ॥೪೬॥

50 ಆಶೀರ್ವಾದ

ಚಂದದಾ ಹಸೆಮಣೆಯು । ಇಂದುರಚಿಸಿಹರಮ್ಮ । ಕುಂದಮ್ಮ ಸಂಭ್ರಮದಿ । ಬಂದು ಕೂಡಮ್ಮಾ । ಮುಂದಹಾಸದ ಮುಖದಿ । ನಗೆಯ ತೋರಮ್ಮಾ । ಚಂದಿರನ ಪೋಲ್ವಕಳೆ ಇಂದಸೀ ಬೆಳಗಮ್ಮ । ॥೧॥ ಅಜ್ಜಿತಾತರು ನಿನ್ನ ಅಕ್ಕರದಿ ಕಾಣುವರು । ಅಪ್ಪ ಅಮ್ಮಂರು ನಿನಗೆ ಅತಿ ಮುದ್ದನೀಡುವರು । ಅತ್ತೆಯರು ಅಕ್ಕರದಿ ಎತ್ತಿ ಕೊಳ್ಳುವರು । ಚಿಕ್ಕಪ್ಪ ಚಿಕ್ಕಮ್ಮನಗಿನಿಲಿಯುವರೂ ॥೨॥ ವರುಷದ್ದಬ್ಬವು ಇಂದು ಕೇಳು ಕಂದಮ್ಮಾ । ಹರುಷವಾಗಿಹುದಮ್ಮ ಇಂದು ನಮಗೆಲ್ಲ । ಹರಿಯರಾತೀರ್ವ ಚನ ನಿನಗಿರಲಿ ಸತತ । ಹರಿಯ ಕರುಣೆಯು ನಿನಗೆ ಪೂರ್ಣವಾಗಿರಲೀ ॥೩॥ ಮುತ್ತಿನಂತಹ ಮಗುವೆ ಮುತ್ತೈದೆಯಾಗು । ಹತ್ತುಮಕ್ಕಳಿಗೆಲ್ಲ ಹಸು ಕೂಸುನೀನಾಗು । ಮತ್ತೆ ಕೃಷ್ಣಯ್ಯಗೇ ನೀ ಭಕ್ತಳಾಗು । ಹೊತ್ತು ಹರಿ ಹರಿಕೆಯನು ಬಾಳು ಸುಖಿಯಾಗೀ ॥೪॥ ಇಂದಿರಾಲೋಲ ವಿಠ್ಠಲನ ಭಕ್ತಳಾಗಿ । ಸಿಂಧುಸುತೆ ಲಕ್ಷ್ಮೀದೇವಿಗೆ ಪುತ್ರಿಯಾಗಿ । ಬಂಧುಬಳಗಕೆ ನೀನು ಕುಂದ ಕುಸುಮವಾವಾಗಿ । ಕಂದ ಆನಂದದಲಿ ಬಾಳು ಚಿರಕಾಲ ॥೫॥

51 ಮಧ್ಯಮಾವತಿ ರೂಪಕತಾಳ

ರಾಧ ವಲ್ಲಭಮಂಗಳಾ । ಯಾದವೇಂದ್ರ । ಮಂಗಳ । ಮಧುಸೂಧನ ಮಂಗಳಾ । ಮಾವಾಗೆ ಮಂಗಳ ॥೧॥ ಜಯಮಂಗಳ ಶುಭಮಂಗಳ ॥ ನಿತ್ಯ ಮಂಗಳ ॥೫॥ ಅಂದಿಗೆ ಪಾದಕೆ ಮಂಗಳ । ಅಂದದ ಕರಕೆ ಮಂಗಳ । ಚಂದ ಕಂಠಕೆ ಮಂಗಳಾ । ಸುಂದರಮುಖಕೆ ಮಂಗಳ ॥೨॥ ಮುದು ನೆಂಕಟ ಮಂಗಳ । ಶ್ರೀದೇವಿಗೆ ಮಂಗಳ । ಪದ್ಮಿನೀಗೆ ಮಂಗಳ । ಪದುಮೇಶ ವಿಠಲನೆ ಮಂಗಳ ॥೩॥

SRI Vidyabharathi Book Centre, Sringeri

CC-O. In Public Domain. Digitized by eGangotri

52 ಭೈಂವಿರಾಗ ಆದಿತಾಳ

ಬದರಿನಿವಾಸಗು । ಪದುಮಾಕ್ಷಿ ಲಕುಮಿಗು । ಕದಲಾರತಿಯಾ । ಬೆಳಗುವೆವೂ ।ಪ। ಸುದತಿಯರೆಲ್ಲ ಕೂಡೀ । ಪದಗಳ ಪಾಡೀ । ಬದರಿ ನಾರಾಯಣನ । ಭಕುತಿಯ ಬೇಡೀ ॥ಅ.ಪ॥ಕಂಪಾದ ಜನಿತೆ ಜಾನ್ಹವಿದೇವಿಗಾರತಿ। ಪರಮ ಪಾವನೆ ತ್ರಿವೇಣಿಗೆ ಆರತಿ । ವರ ವಿದ್ಯಾದಾಯಕೀ । ಸರಸ್ವತೀಗಾರತೀ ।ಪರಮ ಮಂಗಳೆಯಮುನೇ । ಅಲಕನಂದೆಯರಿಗೇ ॥೧॥ ಮಂಗಳತರಂಗಿಣಿ ಗಂಗಾದೇವಿಗೆಆರತಿ । ಸಂಗಮಸ್ಥಳಕೆ ಶೃಂಗಾರದಾರತಿ । ಕಂಗಳಿಗಾನಂದಾ ಕೊಡುವಳಿಗಾರತೀ । ಮಂಗಳೆಯರು ತಂದಾ ಮಂಗಳದಾರತೀ ॥೨॥ ಮುತ್ತಿನ ಆರತೀ । ರತ್ನದ ಆರತಿ । ಚಿತ್ತಜಪಿತೆಗೆ । ನಿತ್ಯಮುಕ್ತಳಿಗೆ । ಮುತ್ತೈದೆ ತನವಕೊಟ್ಟೂ ರಕ್ಷಿಪನಮ್ಮ । ಉತ್ತಮಾಂಗನೆಗೆ ಎತ್ತುವೆವಾರತೀ ॥೩॥ ಇಂದು ವಾರ ಪತ್ತಿಂದು ಪೂರ್ಣಮಿದಿನ। ಇಂದು ಸಾವಿತ್ರಿ ಆಸಂದ ಪಡೆದ ದಿನ । ಇಂದು ಆನಂದತೀರ್ಥರ ಕೃಪೆಯಾದದಿನ । ಇಂದಿರಾಪತಿ ವಿಠ್ಠಲನಾ ನೋಡಿದ ಶುಭದಿನ ॥೪॥ ಇಂದಿರೆಯೊಡಗೂಡೀ । ಇಂದಿರಾಪತಿ ತಾನು । ಇಂದಿರಾಲೋಲನಾಗಿ । ಬಂದು ಕುಳಿತಿಹನು । ಇಂದಿರಾಲೋಲ ವಿಠಲಗೆ ಈಗ । ಕುಂದಣದಾರತಿ । ಬೆಳಗುವೆವೂ ॥೫॥

CC-O. In Public Domain. Digitized by eGangotri

53 ಉಗಾಭೋಗ

ನಿನ್ನಾಟವು ಇದು । ನಿನ್ನ ಚಿತ್ತವು ಇದು । ನಿನ್ನ ಸೇವೆಯು ಇದು । ನಿನಗರ್ಪಿತವೂ ಪನ್ನಗಶಯನ ಇಂದಿರ ಲೋಲ ವಿಠಲ ॥೧॥ ಕಲ್ಯಾಣಪುರದಿಂದ ಕರೆತಂದೆ ಏಕೊ । ಕಲ್ಯಾಣಮೂರ್ತಿಎನಗೆ ಕೊರತೆ ಇದೇಕೊ । ಇಲ್ಲಿ ನಿಲ್ಲದ ಮನಾ । ಅಲ್ಲಿ ಸ್ವೀಗುತಲಿದೇ ಬಲ್ಲೆನೆ ನಿನ್ನ ಮಹಿಮೆ । ಚಿಲ್ಲ ಗೋಪಾಲಾ ಪದುಮೇಶ ವಿಠಲಾ ॥೨॥ ಮನದಲ್ಲಿ ಕ್ಲೇಶವು ಮನೆಮಾಡಿಹುದು । ಮನಬಲಿ ಯೋಚಿಸೇ । ಕೊನೆಇಲ್ಲವೂ ಅನವರತವು ನಿನ್ನ ನೆನೆಯುತಲಿರುವೆನೊ । ನೀನ ರಕ್ಷಕ ಎನ್ನ ಮಾನ ನಿನ್ನದು ಪದುಮೇಶ ವಿಠಲಾ ॥೩॥ ಕರುಣಾಕರ ನೀನು। ಮರೆಹೊಕ್ಕಿರುವೆನಾನು ಕರಪಿಡಿದೆನ್ನನು ।ಪೊರೆವುದು ನೀನು । ಪರಮ ಭಕ್ತರ ನೀನು । ಪೊರೆವೆನೆಂಬುವ ನಿನ್ನ ಬಿರುದನ್ನು ಉಳಿಸೊ । ಇಂದಿರಲೋಲ ವಿಠಲ ॥೪॥

CC-O. In Public Domain. Digitized by eGangotri

ಒಪ್ಪೋಲೆ

ಪುಟ	ಹಾಡಿನ ಸಂಖ್ಯೆ	ಪಂಕ್ತಿ	ತಪ್ಪು	ಒಪ್ಪು
14	6	ಕೊನೇ ಪಂಕ್ತಿ	ಮಾಳ್ಪೆ	ಮಾಳ್ಪೆ
15	6	7	ವರಲಿಕ್ಷ್ಮಿ	ವರಲಕ್ಷ್ಮಿ
15	6	13	ಬಾತ್‌ಲಕ್ಷ್ಮಿ	ಬಾರೌಲಕ್ಷ್ಮಿ
16	8	12	ಞಾನವ	ಪಾನವ
17	8	1	ರೆಲ್ಲಿ	ವರ
17	8	3	ಮುರುಗ	ಮರುಗ
17	8	11	ಭಕುಸಿ	ಭಕುತಿ
17	8	11	ಇಂದು	ಇಂದ
17	9	4	ವಿನ್ನ	ಸಿನ್ನ
18	9	1	ಕರ್ಣಿದಲಿ	ಕರ್ಣದಲಿ
18	9	7	ಕರುಟ್	ಕರುಣ
18	9	8	ನಡಿ	ನಡ
18	10	1	ಸಿರಿವೇಲಿ	ಸಿರಿದೇವಿ
18	10	6	ಮಾಚಿಕದ	ಮಾಣಿಕದ
18	10	7	ಹಾರ	ಹಾರವ
18	10	11	ನೀಡಿ	ನೀಡೌ
19	11	1	ಕಾಯಲ್	ಕಾಯೌ
19	11	3	ಪಾಲಿಸಮ್ಮ	OMIT
19	11	4	ವಂದಿತೆ।	ವಂದಿತೆ ಪಾಲಿಸಮ್ಮ।
19	11	8	ಪ್ಯೋಶ	ಪಸ್ಯೋಶ
19	12	6	ಕುಂಪನವ	ಕುಂದಣದ
19	13	1	ಬಾರೆಲ್ಲೇ	ಬಾರೆಲ್ಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಹಾಡಿನ ಸಂಖ್ಯೆ	ಪಂಕ್ತಿ	ತಪ್ಪು	ಒಪ್ಪು
19	13	1	ಗರಡ	ಗರುಡ
19	13	1	ವರಮ	ಪರಮ
20	13	6	ಭಜಿಸುವೆನು	ಭಜಿಸುವೆನು
20	14	2	ಗೆಜ್ಜೆ	ಗೆಜ್ಜೆ
20	15	4	ನಡ	ನಡು
20	15	6	ಗೋಪಿಯೆ	ಗೋಪಿಯ
21	15	8	ಹು । ತ್ಪದ್ಮಲೀ	ಹೃ । ತ್ಪದ್ಮದಲೀ
21	16	8	ಮುದುಮನಾಭವ	ಪದುಮನಾಭನ
21	16	9	ಮುದದಲ	ಮುದವಲಿ
22	17	4	ಇಂದರಾಲೋಲ	ಇಂದಿರಾಲೋಲ
22	18	8	ದರೆ	ದಿರೆ
22	18	10	ಪಾಲಿಸೆಂವೆನುತಲಿ	ಪಾಲಿಸೆಂವೆನುತಲಿ
23	19	3	ಕುಂಪ್ಟ	ಕುಂದಣ
23	19	4	ಕಟ್ಟಿಹನಾ	ಕಟ್ಟಿಹನಾ । ಬಿಂದುಲಿ ಬಾಪುರಿ ಇಟ್ಟಿಹನಾ
23	19	9	ರೂಷಾ ಲಾವಣ್ಯೆನಾ।	ರೂಪಾ ಲಾವಣ್ಯನಾ।
23	19	10	ಮುಕುತೀಸ	ಮುಕುತೀಶ
23	19	11	ರಮಣೆನಾ।	ರಮಣನಾ।
23	20	Title	ಕಾಡಿ	ಕಾಪಿ
23	20	1	ಸಾರೋ	ಸಾರೇ
24	20	2	ನಾದವ	ನಾದವ
24	20	4	ಕರೆಯುನು	ಕರೆಯನು
24	20	13	ಕೃಷ್ಣನಾ	ಕೃಷ್ಣನಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಡಿನ

ಪುಟ	ಸಂಖ್ಯೆ	ಪಂಕ್ತಿ	ತಪ್ಪು	ಒಪ್ಪು
24	20	14	ಕೆಂಡಿನ	ಕೆಂಪಿನ
24	20	17	ತಿಳ	ತಿಳಿ
29	30	4	ಗೋವರ್ಧನಗೀರೀ	ಗೋವರ್ಧನಗಿರಿ
30	30	4	ಮೂರ್ತಿದ್ಯಾನ	ಮೂರ್ತಿಧ್ಯಾನ
30	30	5	ಕರಣಿಸೋ	ಕರುಣಿಸೋ
33	35	3	ನಲಿಯವಾಸೆ	ನಲಿಯುವಾಸೆ
33	36	2	ಪಂಡರಿರಾಮ	ಪಂಡರಿರಾಯ
33	36	13	ದ್ವಂದದಿ	ದ್ವಂದ್ವದಿ
38	44	8	ಮೂರ್ತಿ	ಮೂರ್ತಿ
44	48	9	ಎಣ್ಣೆಕೆಂಪಿನ ಸಿನಗೇ	ಎಣ್ಣೆಕೆಂಪಿನ
44	48	10	ಪುಲ್ಲಜೆಲ್ವ	ಪುಲ್ಲಲೋಚನ ಜೆಲ್ವ
44	48	16	ಕಂದ ।	ಕಂದು
47	49	12	ಮುರಳಿಗೆ	ಮುರಳಿ
47	49	15	ಕಟ್ಟಿ	ಕಟ್ಟಿ
47	49	19	ಸರ್ವಬಕ್ಷಗಳೂ	ಸರ್ವಭಕ್ಷ್ಯಗಳೂ
50	53	3	ನಿಲ್ಲದ	ನಿಲ್ಲದು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri